# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY





ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.

ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ

55,000 Plus readers

Place Your Ads

Reach New Audience

9448633038

hampitimes@gmail.com Valmiki Circle, Hospete-583201



ಸಂಪುಟ:01 • ಸಂಚಿಕೆ:295 • ನೋಂದಣಿ ನಂ.:KARKAN27911 • ವಿಜಯನಗರ • 23.04.2024 • ಮಂಗಳವಾರ • ಪುಟ:04 • ಬೆಲೆ:2

Volume:01 • Issue:295 • Reg.No:KARKAN27911 • VIJAYANAGARA • 23.04.2024 • Tuesday • Page:04 • Rs:2


## ಆಯ್ಕೆ ನಿಮ್ಮದಾಗಿರಲಿ | ಬಲಿಷ್ಠ ಭಾರತಕ್ಕೆ ಮತದಾನವೇ ಶ್ರೇಷ್ಠ

### ಸಿಎಂ-ಹೋಂ ಮಿನಿಸ್ಟರ್ ವಿರುದ್ಧ ತೀವ್ರ ಆಕ್ರೋಶ | ನಿಮ್ಮನೆ ಮಗಳಾಗಿದ್ರೆ ಹಗುರವಾಗಿ ಮಾತಾಡುತಿದ್ರಾ ?

# ನೇಹಾ ಕೊಂದವನನ್ನು ನೇಣಿಗೇರಿಸಿ ವೀರಶೈವ ಲಿಂಗಾಯತರಿಂದ ಒತ್ತಡ

## ಹೆಣ್ಣಿನ ಮೇಲಾಗುವ ದೌರ್ಜನ್ಯ ನಿಲ್ಲಿಸಿ, ಗೌರವದಿಂದ ಕಾಣಿ | ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯ ಇಲ್ಲವೇ?

## ಕಾಂಗ್ರೆಸ್ ಸರ್ಕಾರಕ್ಕೆ ಪ್ರಶ್ನೆಗಳ ಸುರಿಮಳೆ | ಪ್ರತಿಭಟನೆಯಲ್ಲಿ ಮುಖಂಡರು, ವಿದ್ಯಾರ್ಥಿಗಳು ಭಾಗಿ

**ಹಂಪಿ ಟೈಮ್ಸ್ ಹೊಸಪೇಟೆ**

ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹತ್ಯೆ ಖಂಡಿಸಿ ಹೊಸಪೇಟೆ ತಾಲೂಕು ವೀರಶೈವ ಲಿಂಗಾಯತ ಸಮಾಜದ ಮುಖಂಡರು, ವಿದ್ಯಾರ್ಥಿಗಳು ಸೋಮವಾರ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ನೇಹಾ ಕೊಂದವನನ್ನು ಗಲ್ಲಿಗೇರಿಸಬೇಕೆಂದು ಒತ್ತಾಯಿಸಿ ತಹಶೀಲ್ದಾರ ಎಂ.ಎಂ.ಶೃತಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ವಿಕೃತ ಮನಸ್ಸಿನ ಫಯಾಜ್ ವಿದ್ಯಾರ್ಥಿನಿ ನೇಹಾ ಹಿರೇಮಠಳನ್ನು ಹಾಡುಹಗಲೇ ಕಾಲೇಜಿನ ಆವರಣದಲ್ಲಿ ಹಲವು ಬಾರಿ ಚಾಕುವಿನಿಂದ ಇರಿದು ಕೊಂದಿದ್ದಾನೆ. ಈ ಕೃತ್ಯಕ್ಕೆ ಅನೇಕ ಪ್ರತ್ಯಕ್ಷದರ್ಶಿಗಳಿದ್ದಾರೆ. ಸಿ.ಸಿ.ಕ್ಯಾಮರಾದಲ್ಲಿ ಸೆರೆಯಾದ ಚಿತ್ರಣವನ್ನೇ ಸಾಕ್ಷಿಯನ್ನಾಗಿಸಿಕೊಂಡು ಕೊಲಗಾರನಿಗೆ ತಕ್ಷಣವೇ ಗಲ್ಲಿಗೇರಿಸುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು. ಈ ಘಟನೆಯಿಂದ ನಾಗರಿಕ ಸಮಾಜ ಹೆದರಿ, ತಮ್ಮ ಮಕ್ಕಳನ್ನು ಶಿಕ್ಷಣಕ್ಕೆ ಕಳಿಸಲು ಯೋಚಿಸುವಂತಾಗಿದೆ. ಸರ್ವ ಜನಾಂಗಕ್ಕೆ ತ್ರಿವಿಧ ದಾಸೋಹ ಅನ್ನ, ಅಕ್ಷರ ವಸತಿಯೊಂದಿಗೆ ಶಿಕ್ಷಣ ಕ್ರಾಂತಿಯನ್ನೇ ಮಾಡಿರುವ ವೀರಶೈವ ಲಿಂಗಾಯತ ಸಮಾಜದ ತಾಳ್ಮೆಯನ್ನು ಕೆಣಕುವುದು ಸರಿಯಲ್ಲ. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಕೊಂದವನನ್ನು ಗಲ್ಲಿಗೇರಿಸುವ ಮೂಲಕ ಮಗಳನ್ನು ಕಳೆದುಕೊಂಡ ಕುಟುಂಬಕ್ಕೆ ನ್ಯಾಯ ಒದಗಿಸಬೇಕು. ಸರ್ಕಾರ ಸರ್ವಜನಾಂಗದ ರಕ್ಷಣೆಗಾಗಿ ಇರಬೇಕೆಯೇ ಹೊರತು, ಒಂದು ಸಮುದಾಯದ ಪರವಾಗಿ ಅಲ್ಲ. ರಾಜಕಾರಣಿಗಳು ಜಾತೀ ಬೀಜ ಬಿತ್ತಬಾರದು. ಮಹಿಳೆಯರು ಮೌನವಾಗಿದ್ದರೆಂದ ಮಾತ್ರಕ್ಕೆ ವೀಕ್ ಎಂದಲ್ಲ.




ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರು ಸಕ್ರಿಯವಾಗಿದ್ದಾರೆ. ಜವಾಬ್ಧಾರಿಯುತ ಸ್ಥಾನಗಳಲ್ಲಿರುವ ನಾಯಕರು ಯೋಚನೆ ಮಾಡಿ ಮಾತನಾಡಬೇಕು. ಹಗುರವಾಗಿ ಮಾತನಾಡಬಾರದು. ಉಡಾಫೆ ಉತ್ತರ ಕೊಡದೇ, ಮಹಿಳೆಯರ ರಕ್ಷಣೆಗಾಗಿ ಕಾನೂನು ಜಾರಿಗೊಳಿಸಬೇಕು. ಪ್ರಭುದ್ಧ ಕೊಲೆಗಾರರನ್ನು ಮೈನರ್ ಎಂದೇಳಿ ಬಿಡುಗಡೆ ಮಾಡುವುದನ್ನು ನಿಲ್ಲಿಸಿ. ಹೆಣ್ಣನ್ನು ಗೌರವಿಸಿ ಪೂಜಿಸುವ ಈ ನೆಲದಲ್ಲಿ ಸೂಕ್ತ ಕಾನೂನು ಜಾರಿಗೊಳಿಸಬೇಕು. ರಾಜ್ಯದಲ್ಲಿ ಮಹಿಳೆಯರ, ಮಕ್ಕಳ ಮೇಲೆ ಅತ್ಯಾಚಾರ, ಹತ್ಯೆಗಳು ನಡೆಯುತ್ತಿರುವುದು ಆಡಳಿತದ ವೈಪಲ್ಯವಾಗಿದೆ. ಸರ್ಕಾರ ಕಠಿಣ ಕ್ರಮಕೈಗೊಳ್ಳದೇ ನಿರ್ಲಕ್ಷ್ಯವಹಿಸಿದರೆ ವೀರಶೈವ ಲಿಂಗಾಯತ ಸಮಾಜವು ಆಡಳಿತ ವ್ಯವಸ್ಥೆಯ ಮೇಲೆ ವಿಶ್ವಾಸ ಕಳೆದುಕೊಂಡು ಉಗ್ರ ಹೋರಾಟಕ್ಕೆ ಅಣಿಯಾಗಲಿದೆ ಎಂದು ಎಚ್ಚರಿಸಿದರು.





ಪ್ರತಿಭಟನೆಯಲ್ಲಿ ಹೊಸಪೇಟೆ ತಾಲೂಕು ವೀರಶೈವ ಲಿಂಗಾಯತ ಸಮಾಜ ಅಧ್ಯಕ್ಷ ಎಲ್.ಬಸವರಾಜ, ಉಪಾಧ್ಯಕ್ಷ ಬಿ.ಎಂ.ಸೋಮಶೇಖರ, ಪ್ರಧಾನ ಕಾರ್ಯದರ್ಶಿ ಎನ್.ಮಲ್ಲಿಕಾರ್ಜುನ, ಸಹಕಾರ್ಯದರ್ಶಿ ಕೆ.ಹೆಚ್.ಮಹಾಂತೇಶ್, ಖಜಾಂಚಿ ವೈ.ಒಪ್ಪತ್ತೆಪ್ಪ, ಮುಖಂಡರಾದ ಸಿದ್ದಲಿಂಗಸ್ವಾಮಿ, ಗಂಗಾಧರಸ್ವಾಮಿ, ಎಚ್.ವಿ.ಶರಣಸ್ವಾಮಿ, ಕೆ.ಕೊಟ್ರೇಶ, ಬಿ.ಮಲ್ಲೇಶಪ್ಪ, ಬಿ.ಚಿತ್ತಪ್ಪ, ಅಶ್ವಿನ್ ಕೋತಂಬ್ರಿ, ವಿರೂಪಾಕ್ಷಯ್ಯ, ವಿಶ್ವನಾಥಗೌಡ, ಎಸ್.ಎಂ.ಕಾಶಿನಾಥಯ್ಯ, ಪಂಪಾಪತಿ, ಮಧುರಚೆನ್ನಶಾಸ್ತ್ರಿ, ಜವಳಿ ಲೇಪಾಕ್ಷಿ, ಸಣ್ಣಕಾಶಿ, ಬುಕ್ಕಸಾಗರ ಸಂಗಪ್ಪ, ಚಂದ್ರಶೇಖರ, ಜಯಶೀಲಾ ಕುಮಾರಸ್ವಾಮಿ, ಬಿ.ಎಂ.ವೀಣಾ, ಅನ್ನಪೂರ್ಣಸದಾಶಿವ, ಪುಷ್ಪಮಲ್ಲಿಕಾರ್ಜುನ, ಅರ್ಚನಾ, ಎ.ಎಂ.ಶೋಭಾ, ಮೇಘನಾ ಮಂಜುನಾಥ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ವಿದ್ಯಾರ್ಥಿಗಳು, ಇತರರು ಇದ್ದರು.

### ನಾಗರಿಕ ಸಮಾಜಕ್ಕೆ ದೊಡ್ಡ ಕಳಂಕ



ಹುಬ್ಬಳ್ಳಿಯ ನೇಹಾ ಹಿರೇಮಠಳ ಕೊಲೆಯನ್ನು ಮಾಧ್ಯಮಗಳ ಮೂಲಕ ತಿಳಿದು ಮನಸ್ಸಿಗೆ ಬಹಳ ದುಃಖವಾಯಿತು. ಈ ಹೇಯ ಕೃತ್ಯವನ್ನು ನಾವು ಮತ್ತು ಹೊಸಪೇಟೆಯ ವೀರಶೈವ ಲಿಂಗಾಯತ ಸಮಾಜ ಖಂಡಿಸುತ್ತೇವೆ. ಈ ಘಟನೆ ಇಡೀ ನಾಗರಿಕ ಸಮಾಜಕ್ಕೆ ದೊಡ್ಡ ಕಳಂಕ. ಕೊಲೆಗಾರರಿಗೆ ಕಠಿಣ ಶಿಕ್ಷೆಗೊಳಪಡಿಸಿದರೆ ಇಂತಹ ಘಟನೆಳು ಮರುಕಳಿಸುವುದಿಲ್ಲ. ಸರ್ಕಾರ ಕಠಿಣ ಕಾನೂನುಗಳನ್ನು ಜಾರಿಗೆ ತಂದು ಯಾವುದೇ ಧರ್ಮ, ಜಾತಿ ಭೇದವಿಲ್ಲದೆ ನಿರ್ದಾಕ್ಷಿಣ್ಯ ಕ್ರಮ ಕೈಕೊಂಡು ಮತ್ತೆ ತಪ್ಪು ಮಾಡುವವರಿಗೆ ಭಯ ಹುಟ್ಟಿಸುವ ಕೆಲಸ ಮಾಡಬೇಕು. ಮಗಳನ್ನು ಕಳೆದುಕೊಂಡ ಹಿರೇಮಠ ಕುಟುಂಬಕ್ಕೆ ದುಃಖವನ್ನು ಸಹಿಸುವ ಶಕ್ತಿಯನ್ನು ಬಸವಾದಿ ಶಿವಶರಣರು ನೀಡಲಿ.

**ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು,**
**ಹೊಸಪೇಟೆ ವಿಜಯನಗರ ಜಿಲ್ಲೆ**

## ಇಂದು ಹಂಪಿ ಜೋಡು ರಥೋತ್ಸವ

**ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ಪಂಪಾ ವಿರೂಪಾಕ್ಷೇಶ್ವರಸ್ವಾಮಿ ಮತ್ತು ಹಂಪಿ ಶ್ರೀ ವಿರೂಪಾಕ್ಷ ವಿದ್ಯಾರಣ್ಯ ಪೀಠಾಧೀಶ್ವರರ ಸಹಿತ ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ಏ.23 ರಂದು ಬೆಳಿಗ್ಗೆ 10.25ಕ್ಕೆ ಮಡಿತೇರು, ಸಂಜೆ.4.30ಕ್ಕೆ ಧ್ವಜ ಮುಕ್ತಿಬಾವುಟ ಹರಾಜು ನಂತರ 4.45ಕ್ಕೆ ಬ್ರಹ್ಮರಥೋತ್ಸವ ಜರುಗಲಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.







**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಹಂಪಿ ಟೈಮ್ಸ್**

ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

ಮೊ: 94486 33038

Email: hampitimes@gmail.com


## ನೇಹಾ ಹತ್ಯೆ ಸಿಬಿಐ ತನಿಖೆಗೊಪ್ಪಿಸಿ

### ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ, ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಆಗ್ರಹ



**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ತುಘಲಕ್ ದರ್ಬಾರ ನಡೆಸುತ್ತಿದೆ. ರಾಜ್ಯದ ಮೂಲೆಮೂಲೆಗಳಲ್ಲಿ ದಬ್ಬಾಳಿಕೆ, ದೌರ್ಜನ್ಯಗಳು ಹೆಚ್ಚಾಗಿದ್ದು, ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ನೇಹಾ ಹತ್ಯೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಬಳ್ಳಾರಿ ಲೋಕಸಭಾ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಒತ್ತಾಯಿಸಿದರು.

ನಗರದಲ್ಲಿ ನೇಹಾ ಹತ್ಯೆ ಖಂಡಿಸಿ, ನೇಹಾ ಕುಟುಂಬಕ್ಕೆ ನ್ಯಾಯಕ್ಕಾಗಿ ಬಿಜೆಪಿ ಜಿಲ್ಲಾ ಹಾಗೂ ಮಂಡಲವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದರು. ಕಾಂಗ್ರೆಸ್ ಸರ್ಕಾರದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ವಿದ್ಯಾರ್ಥಿನಿಯನ್ನು ಹಾಡುಹಗಲೇ ಬರ್ಬರವಾಗಿ ಹತ್ಯೆ ಮಾಡಿದ್ದರೂ, ಅದಕ್ಕೆ ಪೂರಕವಾದ ಸಾಕ್ಷಾಧಾರಗಳು ಕಣ್ಣಿಗೆ ಕಾಣುತ್ತಿದ್ದರೂ, ಕುಟುಂಬದವರು ನ್ಯಾಯಾಕ್ಕಾಗಿ ಬೇಡುತ್ತಿದ್ದರೂ ಸಿಎಂ, ಡಿಸಿಎಂ, ಗೃಹಮಂತ್ರಿ ಹಾರಿಕೆ ಉತ್ತರ ನೀಡುತ್ತಿರುವುದು ಅವರ ಸ್ಥಾನಕ್ಕೆ ಶೋಭೆಯಲ್ಲ. ಕಾನೂನು ಸುವ್ಯವಸ್ಥೆ ಆಗದಿದ್ದರೆ, ಸರ್ಕಾರ ನಡೆಸಲು ಆಗದಿದ್ದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲಿ. ರಾಜ್ಯವನ್ನು ಜಂಗಲ್ ರಾಜ್ಯವನ್ನಾಗಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಜನರು ಹಿಡಿಶಾಪ ಹಾಕುತ್ತಿದ್ದಾರೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಮಾತನಾಡಿ, ನೇಹಾ ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ನಿಲ್ಲದು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಿಬಿಐಗೆ ಒಪ್ಪಿಸಬೇಕು. ನಿರ್ಲಕ್ಷವಹಿಸಿದರೆ ರಾಜ್ಯಾದ್ಯಂತ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದರು.

ರಾಜ್ಯ ಯುವಮೋರ್ಚಾದ ಖಜಾಂಚಿ ಸಿದ್ಧಾರ್ಥಸಿಂಗ್, ರಾಜ್ ಎಸ್‌ಟಿ ಮೋರ್ಚಾದ ಅಧ್ಯಕ್ಷ ಬಂಗಾರು ಹನುಮಂತ, ಯುವಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ, ಹೊಸಪೇಟೆ ಮಂಡಲ ಅಧ್ಯಕ್ಷ ಶಂಕರಮೇಟಿ, ಸಾಲಿಸಿದ್ದಯ್ಯಸ್ವಾಮಿ, ಮಹಿಳಾ ಘಟಕದ ಪದಾಧಿಕಾರಿಗಳಾದ ಆರುಂಡಿ ಸುವರ್ಣಾ, ರೇಖಾರಾಣಿ, ಕವಿತಾ, ಉಮಾ, ದೀನಾ ಮಂಜುನಾಥ, ಭಾರತಿ ಪಾಟೀಲ್, ಮೀರಾಬಾಯಿ, ಪ್ರಿಯಾಂಕಜೈನ್ ಇತರರಿದ್ದರು.

## ಸಾಲಬಾಧೆ ರೈತ ಆತ್ಮಹತ್ಯೆ ಸೊಬಟಿ ನಿಂಗಪ್ಪ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ತಾಲೂಕಿನ ಕೇಶವರಾಯನ ಬಂಡಿ ಗ್ರಾಮದ ಸೊಬಟಿ ನಿಂಗಪ್ಪ(60) ಇವರು ಸಾಲದ ಬಾಧೆ ತಾಳಲಾರದೆ, ಆತ್ಮಹತ್ಯೆ ಮಾಡಿಕೊಂಡ ಘಟನೆ ಭಾನುವಾರ ರಾತ್ರಿ ಜರುಗಿದೆ. ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ 70 ಸಾವಿರ ರೂ. ಗಳು ಹಾಗೂ ಹೊರಗಡೆ ಖಾಸಗಿ ಸಾಲ ಇದ್ದು, ಜಿಗುಪ್ಸೆ ಹೊಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಅವರ ಹಿರಿಯ ಪುತ್ರ ಪರಮೇಶ್ ನೀಡಿದ ದೂರನ್ನು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನಿಗೆ4 ಜನ ಪುತ್ರಿಯರು, ಒಬ್ಬ ಪುತ್ರನಿದ್ದಾನೆ.

## ಚೀಲಗಳ ಅಭಾವ: ಖರೀದಿ ಕೇಂದ್ರಕ್ಕೆ ದಾಸ್ತಾನು ತರಬೇಡಿ

**ಹಂಪಿ ಟೈಮ್ಸ್ ಬಳ್ಳಾರಿ**

2023-24 ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುತ್ತಿರುವ ಜೋಳ ದಾಸ್ತಾನಿಗೆ ಸಿರುಗುಪ್ಪ ಮತ್ತು ಕುರುಗೋಡು ಖರೀದಿ ಕೇಂದ್ರಗಳಲ್ಲಿ ಗೋಣಿಚೀಲ ಅಭಾವವಿದ್ದು, ರೈತರು ದಾಸ್ತಾನು ತರದಂತೆ ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಸಕೀನಾ ಅವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕುರುಗೋಡು (ಮೊ.8951307333) ಹಾಗೂ ಸಿರುಗುಪ್ಪ (ಮೊ.9731421918) ಸಂಪರ್ಕಿಸಬಹುದು.

## ಲೋಹಾದ್ರಿಬೆಟ್ಟದ ಶ್ರೀ ಜಂಬುನಾಥರಥೋತ್ಸವ ರಥದ ಗಾಲಿಗೆ ಸಿಲುಕಿ ರಾಮು ಸಾವು



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ದಕ್ಷಿಣ ದಿಕ್ಕಿನಲ್ಲಿರುವ ಲೋಹಾದ್ರಿ ಬೆಟ್ಟದ ಶ್ರೀಜಂಬುನಾಥಸ್ವಾಮಿ ರಥೋತ್ಸವ ಭಾನುವಾರ ಸಂಜೆ ಸಾವಿರಾರು ಭಕ್ತ ಸಮೂಹದೊಂದಿಗೆ ಜರುಗಿದ್ದು, ರಥೋತ್ಸವಕ್ಕೆ ಸನ್ನಿ ಹಾಕುವ ಸಂದರ್ಭದಲ್ಲಿ ಹೊಸಪೇಟೆ 35ನೇ ವಾರ್ಡ್‌ನ ರಾಮು(45) ಎಂಬಾತ ರಥದ ಗಾಲಿ ಕೆಳಗೆ ಸಿಲುಕಿ ಮೃತಪಟ್ಟಿರುವ ದುರ್ಘಟನೆ ಜರುಗಿದೆ.

ಗುಡ್ಡದ ಮೇಲಿನ ದೇವಸ್ಥಾನದ ಮುಂಭಾಗದಲ್ಲಿ ಸಿಮೆಂಟ್ ಕಾಂಕ್ರಿಟ್ ನೆಲ ಹಾಸಿನ ಆವರಣದಲ್ಲಿಯೇ ಸಾವಿರಾರು ಭಕ್ತರು ಐತಿಹಾಸಿಕ ಶ್ರೀ ಜಂಬುನಾಥಸ್ವಾಮಿ ರಥೋತ್ಸವವನ್ನು ಶ್ರದ್ಧಾಭಕ್ತಿಯಿಂದ ಎಳೆಯುವ ಸಂದರ್ಭದಲ್ಲಿ, ಸನ್ನೆ ಹಾಕುವ ವ್ಯಕ್ತಿಯೋರ್ವ ರಥದ ಗಾಲಿಗೆ ಆಕಸ್ಮಿಕವಾಗಿ ಸಿಲುಕಿ ಮೃತಪಟ್ಟಿರುವುದು ಭಕ್ತ ಸಮೂಹದಲ್ಲಿ ದುಃಖಮಡುಗಟ್ಟಿದೆ.

ಜಿಲ್ಲಾಡಳಿತದ ಸೂಚನೆ ಮೇರೆಗೆ ಜಿಲ್ಲಾ ಆರೋಗ್ಯ ಇಲಾಖೆ ಇಲಾಖೆಯಿಂದ ತಾತ್ಕಾಲಿಕ ಕ್ಲಿನಿಕ್, ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಲಾಗಿತ್ತು. ಗಾಲಿಗೆ ಸಿಲುಕಿದ್ದ ವ್ಯಕ್ತಿಯನ್ನು ಕೂಡಲೇ ನಗರದ ನೂರು ಹಾಸಿಗೆ ಅಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ತರಲಾಯಿತು. ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ಜಿಲ್ಲಾ ವೈದ್ಯಾಧಿಕಾರಿ ಶಂಕರನಾಯ್ಕ ತಿಳಿಸಿದ್ದಾರೆ.

ರಥೋತ್ಸವ ಎಳೆಯುವ ಸಂದರ್ಭದಲ್ಲಿ ತೇರಿಗೆ ದೂರದಿಂದಲೇ ಫಲ ಎಸೆದು ಭಕ್ತಿ ಸೇವೆ ಸಲ್ಲಿಸಬೇಕೆಂದು ಪೊಲೀಸರು ಜನರನ್ನು ದೂರ ಸರಿಸಿದರೂ, ಭಕ್ತರು ತಾಮುಂದು ನಾಮುಂದು ಎಂದು ರಥದ ಹತ್ತಿರ ಬರಲು ನೂಕಾಟ ತಳ್ಳಾಟ ನಡೆಸುತ್ತಾರೆ. ಪೊಲೀಸರು ಮತ್ತು ದೇವಸ್ಥಾನ ಸಮಿತಿಯವರ ಸಲಹೆ ಸೂಚನೆಗಳನ್ನು ಎಲ್ಲಾ ರಥೋತ್ಸವಗಳಲ್ಲಿ ಭಕ್ತರು ಪಾಲಿಸಿದರೆ ಇಂತಹ ದುರ್ಘಟನೆಗಳನ್ನು ತಪ್ಪಿಸಬಹುದಾಗಿದೆ ಎಂಬುದು ಪ್ರಜ್ಞಾವಂತರ ಅಭಿಮತವಾಗಿದೆ. ಶಾಸಕ ಎಚ್.ಆರ್.ಗವಿಯಪ್ಪ ಮೃತ ರಾಮು ಅವರ ಮನೆಗೆ ತೆರಳಿ ಮಗನನ್ನು ಕಳೆದುಕೊಂಡ ತಾಯಿಗೆ ಸಾಂತ್ವಾನ ಹೇಳಿದರು.

ಹಂಪಿ ಟೈಮ್ಸ್
HAMPI TIMES

# ನೇಹಾ ಹಿರೇಮಠ್ ಕೊಲೆ ಪ್ರಕರಣ ಸಿಒಡಿ ತನಿಖೆಗೆ: ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪನೆ: ಸಿಎಂ ಸಿದ್ದರಾಮಯ್ಯ

**ಶಿವಮೊಗ್ಗ :** ಹುಬ್ಬಳ್ಳಿ ನೇಹಾ ಹಿರೇಮಠ್ ಕೊಲೆ ಪ್ರಕರಣವನ್ನು ಸಿ.ಒ.ಡಿ ತನಿಖೆಗೆ ವಹಿಸಲಾಗುವುದು. ವಿಶೇಷ ನ್ಯಾಯಾಲಯ ಸ್ಥಾಪಿಸಿ ಕಾಲಮಿತಿಯಲ್ಲಿ ವಿಚಾರಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಸೋಮವಾರ ಶಿವಮೊಗ್ಗ ವಿಮಾನನಿಲ್ದಾಣದಲ್ಲಿ ಮಾಧ್ಯಮ ದವರೊಂದಿಗೆ ಮಾತನಾಡಿದರು. ಮುಖ್ಯಮಂತ್ರಿಗಳು ಹುಬ್ಬಳ್ಳಿಯಲ್ಲಿ ನೇಹಾ ಮನೆಗೆ ಭೇಟಿ ನೀಡಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ ನಮ್ಮ ಸಚಿವರು, ಕಾರ್ಯಕರ್ತರು ಹಾಗೂ ಸಚಿವ ಹೆಚ್. ಕೆ.ಪಾಟೀಲ್ ಭೇಟಿ ನೀಡಿದ್ದಾರೆ. ಧಾರವಾಡಕ್ಕೆ ತೆರಳಿದ ಸಂದರ್ಭದಲ್ಲಿ ಭೇಟಿ ನೀಡುವುದಾಗಿ ಹೇಳಿದರು.

# ಸಿಎಂ ಸಿದ್ದರಾಮಯ್ಯಗೆ ಫ್ರೀ ಟಿಕೆಟ್ ಹಾರ ಅರ್ಪಣೆ

## ಉಚಿತ ಪ್ರಯಾಣಕ್ಕೆ ಕಾನೂನು ವಿದ್ಯಾರ್ಥಿನಿಯ ವಿನೂತನ ಶೈಲಿಯ ಧನ್ಯತೆ



**ಅರಸೀಕೆರೆ:** ಅರಸೀಕೆರೆಯ ಮೊದಲ ವರ್ಷದ ಕಾನೂನು ವಿದ್ಯಾರ್ಥಿನಿಯೊಬ್ಬರು ತಾವು ಉಚಿತವಾಗಿ ಪ್ರಯಾಣಿಸಿದ ಫ್ರೀ ಬಸ್ ಟಿಕೆಟ್ ಗಳಿಂದ ಮಾಡಿದ್ದ ಹಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಾಕಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ರೇಯಸ್ ಪರ ಪ್ರಚಾರಕ್ಕೆ ಆಗಮಿಸಿದ ಸಂದರ್ಭದಲ್ಲಿ ವಿದ್ಯಾರ್ಥಿನಿ ಎಂ.ಎ.ಜಯಶ್ರೀ ಅವರು ಫ್ರೀ ಟಿಕೆಟ್ ಹಾರವನ್ನು ಅರ್ಪಿಸಿದರು.

ಮುಖ್ಯಮಂತ್ರಿಗಳಿಗೆ ಹಾರ ಅರ್ಪಿಸುತ್ತಾ ಜಯಶ್ರೀ ಅವರು, "ನೀವು ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ಸರ್ಕಾರ ಕೊಟ್ಟ ಉಚಿತ ಪ್ರಯಾಣದ ಫಲವಾಗಿ ನಾನು ಕಾನೂನು ವಿದ್ಯಾಭ್ಯಾಸವನ್ನು ನಿರಾತಂಕವಾಗಿ ಮಾಡಲು ಸಾಧ್ಯವಾಗಿದೆ. ಹೀಗಾಗಿ ಎಲ್ಲಾ ಫ್ರೀ ಟಿಕೆಟ್ ಗಳನ್ನು ಜೋಡಿಸಿಟ್ಟುಕೊಂಡು ಹಾರ ಮಾಡಿದ್ದೆ. ನಿಮಗೆ ಅರ್ಪಿಸುವುದಕ್ಕೆ ತಿಂಗಳುಗಳಿಂದ ಅವಕಾಶಕ್ಕಾಗಿ ಕಾಯುತ್ತಿದ್ದೆ. ಇವತ್ತು ಅರಸೀಕೆರೆಗೆ ಬರ್ತಾ ಇದ್ದೀರಿ ಅಂತ ಗೊತ್ತಾಯ್ತು. ಒಂದೇ ಉಸಿರಲ್ಲಿ ಹಾರ ಹಿಡ್ಕೊಂಡು ಓಡಿ ಬಂದಿದ್ದೇನೆ" ಎನ್ನುತ್ತಾ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಧನ್ಯತೆ ಅರ್ಪಿಸಿ ಆಶೀರ್ವಾದ ಪಡೆದಕೊಂಡರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:

**Contact for EVENT COVERAGE & Advertisements in Leading News Paper**

**9448633038**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಉದಯೋನ್ಮುಖ ವಾಲಿಬಾಲ್ ಆಟಗಾರ ಗಣೇಶ್

ಭುಜದ ಶಸ್ತ್ರಚಿಕಿತ್ಸೆಗೆ ಒಳಗಾಗಿ 2019 ರಲ್ಲಿ ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿ 53 ವರ್ಷಗಳ ತರುವಾಯ ತಂಡದ ಆಟಗಾರನಾಗಿ ಕರ್ನಾಟಕಕ್ಕೆ ಚಿನ್ನದ ಪದಕ ತಂದುಕೊಟ್ಟ ಕೀರ್ತಿ ಶಿವಮೊಗ್ಗ ಜಿಲ್ಲೆಯ ರಿಪ್ಪನ್ ಪೇಟೆ ಊರಿನ ಗಣೇಶ್‌ಗೆ ಸಲ್ಲುತ್ತದೆ.

ರಿಪ್ಪನ್ ಪೇಟೆ ಊರಿನ ಜನರ ಸಹಕಾರದಿಂದ ಅವರ ಪ್ರೋತ್ಸಾಹದಿಂದ ನಾನು ಈ ಮಟ್ಟಕ್ಕೆ ಬೆಳೆದಿದ್ದೇನೆ ಅವರ ಋಣ ಈ ಜನುಮದಲ್ಲಿ ತೀರಿಸಲು ಸಾಧ್ಯವಿಲ್ಲ. ನನ್ನ ತಂದೆ ಕೇಶವ್ ಬಟ್ಟೆ ವ್ಯಾಪಾರಿಗಳು ಅವರು ಬಾಲ್ಯದಿಂದ ವಾಲಿಬಾಲ್ ಕ್ರೀಡಾಪಟುವಾಗಿದ್ದುರ ಪರಿಣಾಮ

ಬೇರೆ ಕ್ರೀಡೆಗೆ ಆಕರ್ಷಿತನಾಗದೆ ನೇರವಾಗಿ ವಾಲಿಬಾಲ್ ಕ್ರೀಡೆಯಲ್ಲಿ ನನ್ನನ್ನು ನಾನು ತೊಡಗಿಸಿಕೊಂಡೆ ಎಂದೆಳುವ ಕ್ರೀಡಾ ಪ್ರತಿಭೆ.

01–10ನೇ ತರಗತಿವರೆಗೆ ಸರ್ಕಾರಿ ಪ್ರೌಢಶಾಲೆ, ರಿಪ್ಪನ್ ಪೇಟೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಪದವಿ ಪೂರ್ವ ಶಿಕ್ಷಣವನ್ನು ಆಲ್ ಅಮೀನ್ ಕಾಲೇಜು, ಬೆಂಗಳೂರು ಇಲ್ಲಿ ಪೂರೈಸಿ ಮುಂದೆ ಬಿ,ಬಿ,ಎ.ಪದವಿಯನ್ನು ತಮಿಳುನಾಡಿನ ಭಾರತೀಯಾರ್ ವಿಶ್ವವಿದ್ಯಾನಿಲಯ ಕೊಯಮುತ್ತೂರ್ ನಲ್ಲಿ ಪಡೆದಿರುತ್ತಾರೆ.

ತಂದೆಯವರೇ ಇವರಿಗೆ ಮೊದಲ ಗುರು, ತಾಯಿಯೇ ಪ್ರತ್ಯಕ್ಷ ದೈವ ತಮ್ಮೂರಿನಲ್ಲಿ ಹಿರಿಯ ಆಟಗಾರರ ಜೊತೆ ಜೊತೆಗೆ ತನ್ನನ್ನು ತಾನು ಕ್ರೀಡೆಯಲ್ಲಿ ತೊಡಗಿಸಿಕೊಂಡರು. 7ನೇ ತರಗತಿ ಓದುತ್ತಿರುವಾಗ ಉಮೇಶ್ ಸ್ಥಳೀಯ ವಾಲಿಬಾಲ್ ಆಟಗಾರರು ಇವರಿಗೆ ಮಾರ್ಗದರ್ಶನ ಮಾಡುತ್ತಾರೆ ಯಾವುದೇ ಹಣ ಪಡೆಯದೆ ರಿಪ್ಪನ್ ಪೇಟೆ ಹಾಗೂ ಸುತ್ತಮುತ್ತಲಿನ ವಾಲಿಬಾಲ್ ಆಟಗಾರರಿಗೆ ತರಬೇತಿಯನ್ನು ನೀಡುತ್ತಿದ್ದಾರೆ ಉಮೇಶ್.

ದೈಹಿಕ ಶಿಕ್ಷಣ ಶಿಕ್ಷಕ ಕಿರಣ್ ರವರು 8ನೇ ತರಗತಿ ವಿದ್ಯಾಭ್ಯಾಸವನ್ನು ಮಾಡುವಾಗ ವೈಜ್ಞಾನಿಕವಾಗಿ ಕ್ರೀಡಾ ಕೌಶಲ್ಯಗಳನ್ನು ಕಲಿಸುತ್ತಾರೆ ಮುಂದೆ 10ನೇ ತರಗತಿ ಓದುವ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲಾ ತಂಡದಿಂದ ಕರ್ನಾಟಕ ರಾಜ್ಯ ತಂಡಕ್ಕೆ ಆಯ್ಕೆ ಯಾಗುತ್ತಾರೆ. ಶಿವಮೊಗ್ಗ ಜಿಲ್ಲಾ ವಾಲಿಬಾಲ್ ಅಸೋಸಿಯೇಷನ್ ಅಧ್ಯಕ್ಷರಾದ ಶಶಿ ರವರ ಸಹಕಾರದೊಂದಿಗೆ ಡಿ,ವೈ, ಈ,ಎಸ್.ಗೆ ಆಯ್ಕೆಗೊಂಡು ತರಬೇತಿಗಾಗಿ ಬೆಂಗಳೂರಿಗೆ ಬರುತ್ತಾರೆ. ಎರಡು ವರ್ಷಗಳ ಕಠಿಣ ತರಬೇತಿಯನ್ನು ಮಂಡ್ಯದ ತರಬೇತು ದಾರರಾದ ಕೃಷ್ಣೆಗೌಡರಿಂದ ಪಡೆದು ಆಟದಲ್ಲಿ ಚುರುಕು ಗೊಳ್ಳುತ್ತಾರೆ. ಪ್ರತಿಷ್ಠಿತ ಎರಡು ರಾಷ್ಟ್ರಮಟ್ಟದ ವಾಲಿಬಾಲ್ ಕ್ರೀಡಾ ತರಬೇತು ಕ್ಯಾಂಪುಗಳನ್ನು ಅಟೆಂಡ್ ಮಾಡಿದ ಇವರಿಗೆ ಭಾರತದ ಪ್ರಖ್ಯಾತ ವಾಲಿಬಾಲ್ ಆಟಗಾರರು ಮತ್ತು ತರಬೇತುದಾರರಾದ ಶ್ರೀಧರನ್ ಇವರಿಂದ ಶ್ರೀರಾಮ್ ವಾಲಿಬಾಲ್ ಅಕಾಡೆಮಿಗೆ ಸೇರಿಕೊಳ್ಳಬೇಕೆಂಬ ಸಲಹೆ ದೊರೆತು ಕೊಯಮುತ್ತೂರಿಗೆ ತೆರಳುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ತದನಂತರ ನಡೆದ ಎಲ್ಲಾ ಪ್ರತಿಷ್ಠಿತ ಪಂದ್ಯಾವಳಿಗಳಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯ ಆಟವನ್ನು ಪ್ರದರ್ಶಿಸಿ ಭಾರತಕ್ಕೆ ಕೀರ್ತಿಯನ್ನು ತರುತ್ತಾರೆ.

### ಕ್ರೀಡಾ ಸಾಧನೆಗಳು

ನೇರ ಗುರಿಯೊಂದಿಗೆ ಕ್ರೀಡೆಯಲ್ಲಿ ತೊಡಗಿಸಿಕೊಂಡ ವಾಲಿಬಾಲ್ ಕ್ರೀಡಾಪಟು ಈ ಕೆಳಕಂಡ ಸಾಧನೆಗಳನ್ನು ಮಾಡಿರುತ್ತಾರೆ.

1. 2014(ಬೆಹರಿನ್)17ನೇ ಜೂನಿಯರ್ ಏಷ್ಯನ್ ವಾಲಿಬಾಲ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸುವಿಕೆ.
2. 2012 (ವೆಸ್ಟ್ ಬೆಂಗಾಲ್) 38ನೇ ಜೂನಿಯರ್ ನ್ಯಾಷನಲ್ ವಾಲಿಬಾಲ್ ಚಾಂಪಿಯನ್ಶಿಪ್ ಚತುರ್ಥ ಸ್ಥಾನ, ಸೌತ್ ಜೋನ್ ಯೂಥ್ ನ್ಯಾಷನಲ್ ವಾಲಿಬಾಲ್ ಚಾಂಪಿಯನ್ಶಿಪ್(ಪುದುಚೇರಿ) ತೃತಿಯ ಸ್ಥಾನ,18ನೇ ಸೌತ್ ಜೋನ್ ಸೀನಿಯರ್ ನ್ಯಾಷನಲ್ ವಾಲಿಬಾಲ್ ಚಾಂಪಿಯನ್ಶಿಪ್(ಮಧುರೈ) ದ್ವಿತೀಯ ಸ್ಥಾನ.
3. 2014(ಕೊಲ್ಲಾಪುರ) ಆಲ್ ಇಂಡಿಯಾ ಇಂಟರ್ ಯುನಿವರ್ಸಿಟಿ ವಾಲಿಬಾಲ್ ಚಾಂಪಿಯನ್ಶಿಪ್ ತೃತಿಯ ಸ್ಥಾನ.
4. 2015 (ತಮಿಳುನಾಡು) ಫೆಡರೇಷನ್ ಕಪ್ ವಾಲಿಬಾಲ್ ಚಾಂಪಿಯನ್ಶಿಪ್ ಪ್ರಥಮ ಸ್ಥಾನ.
5. 2019( ಚೆನ್ನೈ) 67ನೇ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್ಶಿಪ್ ಪ್ರಥಮ ಸ್ಥಾನ.
6. 2019 ರಲ್ಲಿ 'ಕೊಚ್ಚಿ ಸ್ಪೈಕರ್ಸ್' ತಂಡದ ಪ್ರೊ ಆಟಗಾರನಾಗಿ ಪ್ರತಿಭೆಯ ಅನಾವರಣ.
7. 2020 ರಾಜಸ್ಥಾನ 33ನೇ ಫೆಡರೇಶನ್ ಕಪ್ ವಾಲಿಬಾಲ್ ಚಾಂಪಿಯನ್ಶಿಪ್ ಪ್ರಥಮ ಸ್ಥಾನ.
8. 2022 ಬೆಂಗಳೂರು ಪ್ರೈಮ್ ಲೀಗ್ ನಲ್ಲಿ ಆಟದ ಅನಾವರಣ.

ಇದಲ್ಲದೆ ಒಟ್ಟು ಆರು ರಾಷ್ಟ್ರೀಯ ಪ್ರತಿಷ್ಠಿತ ವಾಲಿಬಾಲ್ ಪಂದ್ಯಾವಳಿಗಳಲ್ಲದೆ ತೆರೆದ,ಆಹ್ವಾನಿತ ವಾಲಿಬಾಲ್ ಪಂದ್ಯಾವಳಿಗಳಲ್ಲಿ ಸಾಕಷ್ಟು ಬಾರಿ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಸರ್ವರ ಗೌರವಕ್ಕೆ ಪಾತ್ರರಾಗಿರುತ್ತದೆ.

ನಾನು ಸರ್ಕಾರಿ ಕೆಲಸವನ್ನು ಪಡೆದವನಾಗಿದ್ದು ನನ್ನೆಲ್ಲಾ ಕ್ರೀಡಾ ಖರ್ಚುಗಳನ್ನು ಸರ್ಕಾರವೇ ಬರಿಸುತ್ತಿದೆ ನಾನದಕ್ಕೆ ಚಿರಋಣಿ. ಮುಂಬರುವ ಕ್ರೀಡಾಪಟುಗಳಿಗೆ ಬೇಗನೆ ಉದ್ಯೋಗಾವಕಾಶಗಳು ದೊರೆತಲ್ಲಿ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟಲ್ಲಿ ಇನ್ನಷ್ಟು ಸಾಧನೆಗಳು ಕ್ರೀಡೆಯಿಂದ ಹೊರಹೊಮ್ಮುತ್ತವೆ ಆದ್ದರಿಂದ ಸರ್ಕಾರವು ಕ್ರೀಡಾಪಟುಗಳಿಗೆ ಸಹಕರಿಸಬೇಕು.

ಅಸೋಸಿಯೇಷನ್ಗಳ ಮಧ್ಯದಲ್ಲಿರುವ ಶೀಥಲ ಸಮರವನ್ನು ನಿಲ್ಲಿಸಿ ಹೆಚ್ಚು ಹೆಚ್ಚು ಕ್ರೀಡಾಕೂಟಗಳನ್ನು ನಡೆಸಿ ಹೊಸ ಹೊಸ ಕ್ರೀಡಾ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಿ ಕೊಡಬೇಕಾಗಿದೆ. ಸಾಧಕರನ್ನು ಸಮಾಜಕ್ಕೆ ತಲುಪಿಸುವ ಜವಾಬ್ದಾರಿ ಪತ್ರಿಕೆ ಮತ್ತು ಟಿವಿ ಮಾಧ್ಯಮದವರಿಗೆ ಇದ್ದು ಅವರು ಸಹಕರಿಸಿ ಪ್ರೋತ್ಸಾಹಿಸಬೇಕಿದೆ.

ಪೋಷಕರು ತಮ್ಮ ಮಕ್ಕಳು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದಾರೆ ಎಂಬುದನ್ನು ಗಮನಿಸಬೇಕು ಕ್ರೀಡೆಯಲ್ಲಿ ಮಕ್ಕಳನ್ನು ಅವರ ಆಸಕ್ತಿಗೆ ಅನುಸಾರವಾಗಿ ತೊಡಗಿಸಿಕೊಳ್ಳಲು ನೆರವಾಗಬೇಕು.

ಯುವ ಸಮೂಹ ಭರವಸೆಯನ್ನು ಕಳೆದುಕೊಳ್ಳದೆ ತಾವು ಆಯ್ಕೆ ಮಾಡಿಕೊಂಡ ಕ್ರೀಡೆಯಲ್ಲಿ ಮುಂದುವರೆಸಬೇಕು ಜೊತೆಜೊತೆಗೆ ಲಭ್ಯವಾಗುವ ಉದ್ಯೋಗವನ್ನು ಸೇರಿಕೊಳ್ಳಬೇಕು ಮುಂದೆ ತಮಗಿಷ್ಟವಾದ ಹುದ್ದೆಯನ್ನು ಸೇರಿಕೊಳ್ಳುವುದಕ್ಕೆ ಅವಕಾಶವಿರುತ್ತದೆ ವಯಸ್ಸು ಕಳೆದುಕೊಂಡರೆ ಸಿಗುವುದಿಲ್ಲ ಮೊಬೈಲ್ ನ ಮಾಯೆಗೆ




ಒಳಗಾಗದೆ ಸರಿಯಾಗಿ ಏಕಾಗ್ರತೆಯಿಂದ ಒಂದು ಕ್ರೀಡೆಯನ್ನು ಆಯ್ಕೆ ಮಾಡಿಕೊಂಡು ಕ್ರೀಡಾ ತರಬೇತಿಯಲ್ಲಿ ತೊಡಗಿಕೊಂಡು ಯಶಸ್ಸನ್ನು ಗಳಿಸಬೇಕು.

ತರಬೇತುದಾರರ ಮಾರ್ಗದರ್ಶನ, ಸರಿಯಾದ ಊಟದ ಕ್ರಮ, ಕ್ರೀಡಾ ಆಘಾತವಾದಲ್ಲಿ ವೈದ್ಯರ ಸಲಹೆ ಬಹುಮುಖ್ಯವಾದುದು ಅದನ್ನು ಚಾಚು ತಪ್ಪದೇ ಪಾಲಿಸಬೇಕು.

ನನ್ನೂರಿನವರ ಸಹಕಾರ, ತರಬೇತುದಾರರ ಮಾರ್ಗದರ್ಶನ, ಇಲಾಖೆಗಳ ಸಹಾಯ ನನ್ನನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ ನಾನಿವರೆಲ್ಲರಿಗೂ ಆಭಾರಿಯಾಗಿದ್ದೇನೆ. ನನ್ನ ತಂದೆಯವರು ಇಂದಿಗೂ ಸ್ಥಳೀಯ ಕ್ರೀಡಾಪಟುಗಳಿಗೆ ಪ್ರೋತ್ಸಾಹವನ್ನು ಕೊಡುತ್ತಾ ಬಂದಿದ್ದಾರೆ ನನಗೆ ಲಭ್ಯವಾಗುವ ಕ್ರೀಡಾ ಸಮವಸ್ತ್ರಗಳನ್ನು ಅವರಿಗೆ ನೀಡುತ್ತಾರೆ ಕ್ರೀಡೆಯನ್ನು ಇಂದಿಗೂ ಬೆಳೆಸುತ್ತಿದ್ದಾರೆ ನಾನು ಕೂಡ ಆ ದಿಸೆಯಲ್ಲಿ ಇದ್ದೇನೆ ಯಾವುದೇ ಕ್ರೀಡಾಪಟುವಿಗೆ ಸಹಾಯಬೇಕಾದರೆ ನನ್ನನ್ನು ಸಂಪರ್ಕಿಸಿ ಎಂದು ಹೇಳುತ್ತಾರೆ ಕ್ರೀಡಾ ಪ್ರೋತ್ಸಾಹಿ ಗಣೇಶ್.

2014 ರಿಂದ 23ರ ವರೆಗೆ ಇಂಡಿಯನ್ ಪೋಸ್ಟಲ್ ಡಿಪಾರ್ಟ್ಮೆಂಟ್ ನಲ್ಲಿ ಕರ್ತವ್ಯಕ್ಕೆ ಸೇರಿ ಸೇವೆ ಸಲ್ಲಿಸಿದ ಇವರು ಸದ್ಯ ಕರ್ನಾಟಕ ಪೊಲೀಸ್ ಇಲಾಖೆಯ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಹುದ್ದೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಮುಂದೆಯೂ ಇವರು ವಾಲಿಬಾಲ್ ಕ್ರೀಡೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಇನ್ನಷ್ಟು ಕ್ರೀಡಾ ಸಾಧನೆಗಳನ್ನು ಮಾಡುವುದರ ಮುಖಾಂತರ ಇಲಾಖೆಗೆ, ರಾಷ್ಟ್ರ,ರಾಜ್ಯಕ್ಕೆ ಕೀರ್ತಿ ತರುವಂತಾಗಲಿ ಹಾಗೂ ಕ್ರೀಡಾ ಕ್ಷೇತ್ರವನ್ನು ಬಯಸಿ ಬಂದ ಕ್ರೀಡಾಪಟುಗಳಿಗೆ ಮಾರ್ಗದರ್ಶನ, ಸಲಹೆ ಮತ್ತು ಸಹಕಾರವನ್ನು ನೀಡಲಿ.

# ಬೇಸಿಗೆ ರಜೆ ಅಂದು–ಇಂದು

ಬಾಲ್ಯವೆಂಬುದು ಒಂದು ಮಧುರವಾದ ಸವಿನೆನಪು. ಪ್ರತಿಯೊಬ್ಬ ವ್ಯಕ್ತಿಗೂ ಬಾಲ್ಯವೆಂಬುದು ತಮ್ಮ ಜೀವನದ ಮೊದಲ ಹಂತ. ಬಾಲ್ಯಾವಸ್ಥೆಯಲ್ಲಿ ನಮಗೆ ಯಾವುದೇ ತೆರನಾದ ಚಿಂತೆಯಾಗಲಿ ಒತ್ತಡವಾಗಲಿ ಇರುವುದಿಲ್ಲ. ಮನಸ್ಸು ಕೂಡ ಪರಿಶುದ್ಧವಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ತಾನು ಕಳೆದ ಬಾಲ್ಯದ ನೆನಪುಗಳು ಅವಿಸ್ಮರಣೀಯ.

ಬೇಸಿಗೆ ರಜೆ ಬಂತು ಅಂದರೆ ಸಾಕು ನಮ್ಮ ಆಟಗಳೆಲ್ಲ ಶುರುವಾಗುತ್ತಿತ್ತು. ಸಹ್ಯಾದ್ರಿಯ ತಪ್ಪಲಿನಲ್ಲಿ ನನ್ನ ಹುಟ್ಟೂರು. ಅಲ್ಲಿ ನಾನು ನನ್ನ ಬಾಲ್ಯದ ದಿನ ಕಳೆದಿದ್ದು, ಅದರ ಮಜವೇ ಬೇರೆ. ನಾವು ಕಳೆದ ಬಾಲ್ಯ ನನ್ನ ಮಕ್ಕಳಿಗೆ ಇಂದಿನ ಪರಿಸ್ಥಿಯಲ್ಲಿ ಸಿಗುವುದಿಲ್ಲವಲ್ಲ ಅನ್ನುವುದೇ ನನಗೆ ಬೇಸರ.

ನಮ್ಮದು ಅವಿಭಕ್ತ ಕುಟುಂಬ. ಬೇಸಿಗೆ ರಜೆಗೆ ಚಿಕ್ಕಪನವರ , ಅತ್ತೆಯ ಮಕ್ಕಳೆಲ್ಲಾ ಮನೆಗೆ ಬರುತ್ತಿದ್ದರು. ನಮ್ಮ ಅಡಿಕೆ ತೋಟದ ಮಧ್ಯೆ ಪೇರಳೆ, ಪನ್ನೇರಳೆ, ಕಾಕಿಹಣ್ಣು, ಹೀಗೆ ಸಣ್ಣ ಪುಟ್ಟ ಹಣ್ಣಿನ ಮರಗಳಿದ್ದವು. ನಾವು ಮಕ್ಕಳೆಲ್ಲಾ ಸೇರಿ ತೋಟಕ್ಕೆ ಹೋಗಿ ಹಿಂಬದಿಯಯಲ್ಲಿ ಹರಿಯುತ್ತಿದ್ದ ತೊರೆಯಲ್ಲಿ ಆಟವಾಡುತ್ತಿದ್ದೆವು.

ಹುಡುಗರು ಮರವನ್ನು ಹತ್ತಿ ಹಣ್ಣನ್ನು ಕಿತ್ತುಕೊಡುತ್ತಿದ್ದರು. ನಾವು ಹುಡುಗಿಯರು ಲಂಗದಲ್ಲಿ ಹಣ್ಣನ್ನು ಕಟ್ಟಿಕೊಂಡು ತೋಟದ ಹಿಂದೆ ಇದ್ದ ಧರೆಯ ಮೇಲೆ ಹತ್ತಿ ಹರಟೆ ಹೊಡೆಯುತ್ತಾ ಹಣ್ಣನ್ನೆಲ್ಲಾ ತಿಂದು ಖಾಲಿಮಾಡುತ್ತಿದ್ದೆವು. ಬೆಳಗ್ಗೆ ಎದ್ದು ಹೊರಟರೆ ಮಧ್ಯಾಹ್ನದ ಊಟದ ಹೊತ್ತಿಗೆ ಮನೆಗೆ ಬಂದು ಸೇರುತ್ತಿದ್ದೆವು.

ನಮ್ಮ ತೋಟದಲ್ಲಿ ಬೇಸಿಗೆ ದಿನಗಳಲ್ಲಿ ತೋಟ ತಂಪಾಗಿರಲು ತೋಟದ ಮಧ್ಯೆ ಹರಿಯುತ್ತಿದ್ದ ಹಳ್ಳಕ್ಕೆ ಸಣ್ಣದಾದ ಆಣೆಕಟ್ಟನ್ನು ಹಾಕುತ್ತಿದ್ದರು. ನಾವು ಮಕ್ಕಳೆಲ್ಲಾ ಮಧ್ಯಾಹ್ನ ಮನೆಯವರೆಲ್ಲಾ ಮಲಗಿರುವ ಸಂದರ್ಭ ನೋಡಿಕೊಂಡು ಯಾರಿಗೂ ಗೊತ್ತಾಗದಂತೆ ಒಂದು ಪಾಣಿ ಪಂಚೆಯನ್ನು ತೆಗೆದುಕೊಂಡು ಹೋಗಿ ಸಣ್ಣ ಸಣ್ಣ ಮೀನುಗಳನ್ನು ಹಿಡಿದು ಬಾಟಲಿಗೆ ಹಾಕಿ ಅದನ್ನು ತಂದು ಬಾವಿಗೆ ಬಿಟ್ಟು ಸಂಭ್ರಮಿಸುತ್ತಿದ್ದೆವು. ನಮ್ಮದು ಸಂಪ್ರದಾಯಸ್ಥ ಕುಟುಂಬವಾದ್ದರಿಂದ ಮೀನುಗಳನ್ನೆಲ್ಲಾ ಮುಟ್ಟಿದ್ದೇವೆ ಎಂದು ದೊಡ್ಡವರಿಗೆ ಗೊತ್ತಾದಾಗ ಬೈಸಿಕೊಂಡು ಸ್ನಾನ ಮಾಡಿ ಮನೆ ಒಳಗೆ ಪ್ರವೇಶಿಸಿದ್ದೂ ಇದೆ.



ಚೇತನ ಭಾರ್ಗವ
ಲೇಖಕಿ

Scan For Digital Colourful
HAMPI TIMES E-paper

ನಮ್ಮ ಕಾಲದಲ್ಲಿ ಲಗೋರಿ,



ಕಂಬದ ಆಟ , ಚನ್ನೇಮಣೆ, ಕರವೀರ ಹೂವಿನ ಬೀಜದಲ್ಲಿ ಕಲ್ಲಾಟ, ಕಣ್ಣುಮುಚ್ಚಾಲೆ, ಚಿನ್ನಿದಾಂಡು, ಕುಂಟೆಪಿಲ್ಲೆ, ಗರಟದಲ್ಲಿ ಮಣ್ಣನ್ನು ತುಂಬಿ ಇಡ್ಲಿ ಮಾಡುವ ಆಟ ಹೀಗೆ ಹಲವು ಮಕ್ಕಳು ಕೂಡಿ ಆಡುವಂತಹ ಆಟವನ್ನೇ ಆಡುತ್ತಿದ್ದೆವು. ನಮಗೆ ಯಾರೂ ಮೇಲ್ವಿಚಾರಣೆಗೆ ಇರಬೇಕೆಂದಿರಲಿಲ್ಲ. ಮಕ್ಕಳದ್ದೇ ಪ್ರಪಂಚ. ಮಾವಿನ ಹಣ್ಣಿನ ಕಾಲ ಶುರುವಾದೊಡನೆ ಮಾವಿನ ಮರದಿಂದ ಮಾವಿನ ಹಣ್ಣನ್ನು ಕಿತ್ತು ಸಂಭ್ರಮಿಸುತ್ತಾ ತಿನ್ನುತ್ತಿದ್ದೆವು.

ಆದರೆ ಈಗಿನ ಮಕ್ಕಳಿಗೆ ಈ ರೀತಿಯ ಬಾಲ್ಯ ಸಿಗುವುದು ಕಷ್ಟ. ಮಕ್ಕಳು ಮಕ್ಕಳೊಡನೆ ಬೆರೆತು ಆಡಬೇಕು. ಇಂದಿನ ಮಕ್ಕಳು ಗ್ಯಾಜೆಟ್ ದಾಸರಾಗಿದ್ದಾರೆ. ಮೊಬೈಲ್ ನ ಗೀಳು ವಿಪರೀತವೆನ್ನುವಷ್ಟು ಹೆಚ್ಚಾಗಿದೆ. ನಾವು ಮಕ್ಕಳ ಜೊತೆ ಆಡುತ್ತಿದ್ದರಿಂದ ನಮಗೆ ಸೋಲು, ಗೆಲುವಿನ ಪರಿಚಯವಾಗುತ್ತಿತ್ತು. ಗೆದ್ದರೆ ಎಷ್ಟು ಸಂಭ್ರಮಿಸುತ್ತಿದ್ದೆವೋ ಸೋತರೂ ಕೂಡ ಮತ್ತೆ ಗೆಲ್ಲಬಹುದು ಖುಷಿಯಿಂದಲೇ ಆಡುತ್ತಿದ್ದೆವು. ಈಗಿನ ಮಕ್ಕಳು ಗೆಲುವಿನ ಬೆನ್ನ ಹಿಂದೆ ಓಡುತ್ತಾರೆ. ಸೋತರೆ ಬೇಗ ಹತಾಶರಾಗುತ್ತಾರೆ.

ಇಂದಿನ ಕಾಲದಲ್ಲಿ ಮಕ್ಕಳಿಗೆ ರಜೆ ಶುರುವಾದರೆ ಹೆತ್ತವರಿಗೆ ಅವರನ್ನು ಸಂಭಾಳಿಸುವುದು ಹೇಗೆ ಎಂಬ ದೊಡ್ಡ ಚಿಂತೆ ಹೆಚ್ಚಿನವರಿಗೆ ಕಾಡುತ್ತದೆ. ಹಾಗಾಗಿಯೇ ಅವರನ್ನು ಬೇಸಿಗೆ ಶಿಬಿರಕ್ಕೆ ಕಳಿಸುತ್ತಾರೆ. ಅದು ಶಾಲೆಯ ಪರ್ಯಾಯ ವ್ಯವಸ್ಥೆ ಅಷ್ಟೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಕೆಲವು ಬೇಸಿಗೆ ಶಿಬಿರಗಳಂತೂ ಹಣ ಗಳಿಕೆಯ ಮಾರ್ಗವಾಗಿಸಿಕೊಂಡಿದ್ದಾರೆ. ಪೋಷಕರು ಇದರ ಬಗ್ಗೆ ಜಾಗೃತವಾಗಿರಬೇಕು.

ಇಂದಿನ ಮಕ್ಕಳು ಪರೀಕ್ಷೆ ಮುಗಿದು ರಜೆ ಬಂತೆಂದರೆ ಒಂದು ತಾಸು ಹೆಚ್ಚು ಮೊಬೈಲ್ ಹಾಗೂ ಟಿವಿಯನ್ನು ನೋಡುತ್ತಾರೆ. ರಜಾ ದಿನಗಳಲ್ಲಿ ಅಜ್ಜ ಅಜ್ಜಿಯ ಮನೆಗೆ ಹೋಗುವುದರಿಂದ ಮಕ್ಕಳ ಮತ್ತು ಅವರ ನಡುವಿನ ಭಾಂದವ್ಯ ಹೆಚ್ಚಾಗುತ್ತದೆ. ದೊಡ್ಡಪ್ಪ ಚಿಕ್ಕಪ್ಪ ಹಾಗೂ ಅತ್ತೆ ಮಕ್ಕಳ ಒಡಗೂಡಿ ಆಡುವುದರಿಂದ ಸಂಬಂಧದ ಮಾಧುರ್ಯ ಹಾಗೂ ಒಡನಾಟ ಬೆಳೆಯುತ್ತದೆ.

ಆದರೆ ಇಂದಿನ ಆಧುನಿಕ ಯುಗದಲ್ಲಿ ತಂದೆ ತಾಯಿ ಇಬ್ಬರು ದುಡಿಯೋದು ಅನಿವಾರ್ಯವಾಗಿದೆ. ಹಳ್ಳಿಯಲ್ಲೂ ಅಜ್ಜಿ ಅಜ್ಜ ಇಬ್ಬರೇ ಇರುವ ಪರಿಸ್ಥಿತಿ ಇಂದಿನದ್ದಾಗಿದೆ ಹಾಗಾಗಿ ಮಕ್ಕಳನ್ನು ನಿಭಾಯಿಸಲು ಅನೇಕ ತರಗತಿಗಳಿಗೆ ಕಳುಹಿಸುವುದು ಬಿಟ್ಟರೆ ಬೇರೆ ದಾರಿ ಇಲ್ಲವಾಗಿದೆ.


ಇಂದಿನ ಮಕ್ಕಳು ಆಡುವುದೆಂದರೆ ಟಿವಿ ವಿಡಿಯೋ ಗೇಮ್ ಹಾಗೂ ಮೊಬೈಲ್ ಗೇಮ್ ಗಳ ಮೊರೆ ಹೋಗಿದ್ದಾರೆ. ಸಾಂಪ್ರದಾಯಿಕ ಆಟಗಳಾದ ಲಗೋರಿ ಗೋಲಿ ಕಬಡ್ಡಿ ಕೊಕ್ಕೋ ಹೀಗೆ ಎಲ್ಲ ಮಕ್ಕಳ ಒಡಗೂಡಿ ಆಡುವ ಆಟವೇ ಇಲ್ಲವಾಗಿದೆ. ಇದು ಮಕ್ಕಳ ದೈಹಿಕ ಶ್ರಮ ಬೇಡುವ ಆಟಗಳಾಗಿದ್ದು ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಸಹಾಯಕ ವಾಗುತ್ತದೆ ಆದರೆ ಮೊಬೈಲ್ ಎಂಬ ಮಾಯೆ ಮಕ್ಕಳನ್ನು ಬಿಡದೆ ತನ್ನ ಬಂಧನದಲ್ಲಿ ಹಿಡಿದಿಟ್ಟಿದೆ ಹಾಗಾಗಿ ಇಂದಿನ ಮಕ್ಕಳಿಗೆ ಹೊರಗಡೆ ಮೈದಾನದಲ್ಲಿ ಆಡುವುದೇ ತಿಳಿಯದಾಗಿದೆ.

ಆದ್ದರಿಂದ ಪೋಷಕರು ಬೇಸಿಗೆ ಶಿಬಿರಗಳು ಹಾಗೂ ಶಿಕ್ಷಕರು ಮಕ್ಕಳ ರಜಾದಿನಗಳ ಸದುಪಯೋಗಗಳನ್ನು ದೈಹಿಕ ಹಾಗೂ ಮಾನಸಿಕ ವಿಕಸನಕ್ಕೆ ಅನುವು ಮಾಡಿಕೊಡುವಂತಹ ಚಟುವಟಿಕೆಗಳು ಆಟಗಳು ಹಾಗೂ ಸುತ್ತಮುತ್ತಲಿನ ಪರಿಸರಕ್ಕೆ ಸಹಾಯವಾಗುವಂತಹ ಕಾರ್ಯಗಳು ಹಾಗೂ ಸಮಾಜಕ್ಕೆ ಹಾಗೂ ಜನರಿಗೆ ಉಪಯೋಗವಾಗುವಂತಹ ಮಾದರಿ ಚಟುವಟಿಕೆಗಳನ್ನು ಮಾಡಿಸುತ್ತಾ ಅವರ ಸರ್ವತೋಮುಖ ಬೆಳವಣಿಗೆಗೆ ಕಾರಣೀಭೂತರಾಗಬೇಕು.

ನನ್ನ ನಾಲ್ಕು ವರ್ಷದ ಮಗಳು ಶಾಲೆಗೆ ರಜೆ ಬಂದೊಡನೆ ನನ್ನ ತವರು ಊರಾದ ತೀರ್ಥಹಳ್ಳಿ ಸಮೀಪದ ಕಮ್ಮರಡಿಗೆ ಹೋಗಿದ್ದಳು ಅಲ್ಲಿ 10 ದಿನಗಳ ಕಾಲ ತನ್ನ ಅಜ್ಜ ಅಜ್ಜಿಯೊಂದಿಗೆ ಮೊಬೈಲ್ ಹಾಗೂ ಟಿ. ವಿ ಯ ಹಂಗಿಲ್ಲದೆ ಕಾಲ ಕಳೆದು ಅಲ್ಲಿಯ ಯೋಗ ಶಿಬಿರ ಭಜನೆ ಕಾರ್ಯಕ್ರಮಗಳಲ್ಲಿ ಹಾಗೂ ಪೂಜೆ ಪುನಸ್ಕಾರ ಹಾಗೂ ಸಮುದಾಯ ಭವನದಲ್ಲಿ ಗುಂಪು ಸೇರಿ ಊರಿನವರು ನಡೆಸುವ ಅನೇಕ ಚಟುವಟಿಕೆಗಳಲ್ಲಿ ಭಾಗವಹಿಸಿ ತುಂಬಾ ಉತ್ಸಾಹಿತಳಾಗಿದ್ದಳು. ಊರಿಂದ ಬಂದಾಗ ಅವಳ ಸ್ವಭಾವದಲ್ಲೂ ಹಾಗೂ ಎಲ್ಲಾ ಮಕ್ಕಳರೊಡನೆ ಒಡನಾಟದಲ್ಲೂ ಬಹಳ ಧನಾತ್ಮಕ ಬದಲಾವಣೆ ಬಂದಿದ್ದು ನನಗೆ ಆಶ್ಚರ್ಯವೆನಿಸಿತು. ಅದರಂತೆಯೇ ಎಲ್ಲ ಮಕ್ಕಳು ಜನರೊಡಗೂಡಿ ತಮ್ಮ ವ್ಯಕ್ತಿತ್ವ ವಿಕಸನಕ್ಕೆ ಅನುವು ಮಾಡಿಕೊಡಬೇಕು ಎಂದೇ ನನ್ನ ಆಶಯ. ಬೇಸಿಗೆ ರಜದ ಸದುಪಯೋಗ ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದಲ್ಲಿ ಧನಾತ್ಮಕ ಬದಲಾವಣೆಗಳನ್ನು ತರಲಿ. ಟಿವಿ ಹಾಗೂ ಮೊಬೈಲಗಳ ಹಂಗನ್ನು ತಕ್ಕಮಟ್ಟಿಗೆ ಬಿಟ್ಟು ಹಲವು ಹತ್ತು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗುವ ಮೂಲಕ ತಮ್ಮ ಕಾರ್ಯಕ್ಷೇತ್ರವನ್ನು ವೃದ್ಧಿಸಿಕೊಳ್ಳಲಿ ಎಂಬುದು ಎಲ್ಲಾ ಪೋಷಕರ ಸದಾಶಯ.

**ಕವಿ ಮನಸು**

## ಪ್ರೇಮ ಚಂದಿರ



ಕರದಲ್ಲಿ ಕನ್ನಡಿ ಹಿಡಿದೇನ
ಕಣ್ಣಿಗೆ ಕಾಡಿಗೆ ಹಚ್ಚೇನ
ಕಾಡಿಗೆ ಕಣ್ಣಲ್ಲಿ ನಾ ಚೆಂದಾಗಿ
ಕಂಡೇನ ನಿನಗೆ ನನ್ನ ರಾಯ
ಒಲವಿಂದ ಒಮ್ಮೆ ಹೇಳಬಾರದೇನಾ

ಬಿಳಿ ಮಲ್ಲಿಗೆದಂಡೆ ತುರುಬಿಗೆ
ತುರುಕಿ ನಿನ್ನ ಬರುವಿಕೆಗಾಗಿ
ವೈನಾಗಿ ಕಾದಿಹೆನು ನನ್ನ ರಾಯ
ಮಲ್ಲಿಗೆ ಪರಿಮಳ ಆರುವ ಮುನ್ನ
ಓಡಿ ಬಾರಯ್ಯ ನನ್ನ ರಾಯ

ವಸಂತ ಋತುವದು ಬಂದಿದೆ ಈಗ
ಹೊಸ ಗಾನವನು ಹಾಡೋಣ ಬೇಗ
ಅವಸರ ಮಾಡಿ ಬಾರೋ ರಾಯ
ಕಾತುರದಿಂದ ಕಾದಿಹೆ ನಾನಿಲ್ಲಿ
ನವ ಚಿಗುರಿಗೆ ನಾಂದಿಯ ಹಾಕೋಣ

ಕನ್ನಡಿಯಲ್ಲಿ ಕಾಣುವ ಎನ್ನಯ ಅಂದ
ಸುಳ್ಳು ಹೇಳುವುದು ಎಂಬ ಅನುಮಾನ
ನಿನ್ನಯ ಹೃದಯದಿ ಕಾಣಲು ವದನ
ಕಳೆದು ಹೋಗಿದೆ ಮನದಲಿ ಬಿಗುಮಾನ
ನೆನೆಯಿತು ಮನವು ಪ್ರೇಮ ಚಂದಿರನ

**ಕೆ ಎಂ ಬಸವರಾಜ**
ನಿವೃತ್ತ ಇಂಜನಿಯರ್, ಹೊಸಪೇಟೆ

## ಪ್ರಕೃತಿ

ಪ್ರಕೃತಿಗೆ ಮನಸೋತವರೆಲ್ಲ
ಪ್ರಕೃತಿಕಂಡುಬೆರಗಾದವರೆಲ್ಲ
ಪ್ರಕೃತಿಕಂಡುನೋಂದವರಿಲ್ಲ
ಪ್ರಕೃತಿಯೇ ಬಾಳಿಗೆ ಎಲ್ಲಾಎಲ್ಲಾ

ಹೆಣ್ಣು ಪ್ರಕೃತಿಯ ರೂಪ
ಸಹನೆ ಅವಳ ಪ್ರತಿರೂಪ
ಒಲವಿನ ಸ್ನೇಹಗಳನಿಜರೂಪ
ಅವಳೇ ಪ್ರೀತಿಯ ಅನುರೂಪ

ಹರಿವ ನೀರಿಗೆ ಅಪ್ಪಣೆಯಿಲ್ಲ
ಬೀಸೋಗಾಳಿಯನಿಲ್ಲಿಸುವರಿಲ್ಲ
ಬಿದ್ದ ಮಳೆಯ ಹಿಡಿಯುವರಿಲ್ಲ
ಪ್ರಕೃತಿ ಹೃದಯವಂತಿಕೆ ಬಲ್ಲವರಿಲ್ಲ

– ಜಿ ಆರ್ ಬಸವರಾಜೇಶ್ವರಿ
**ಸರ್ಕಾರಿ ಪ್ರೌಢಶಾಲೆ ಹಗರಿಗಜಾಪುರ**

## ನಾಸ್ತಿಕ

ನಾನು ನಾಸ್ತಿಕ, ದೇವರಲ್ಲಿ ನನಗೆ ನಂಬಿಕೆಯಿಲ್ಲ' ಎಂದು ಹೇಳುತ್ತಿದ್ದ ವ್ಯಕ್ತಿ. ಒಂದು ದಿನ ಅವನ ಮಗುವಿಗೆ ಅಪಘಾತವಾಯಿತು. ಯಾರೋ ಅಪರಿಚಿತ ವ್ಯಕ್ತಿ ರಕ್ತದಾನ ಮಾಡಿ, ಮಗುವಿನ ಜೀವ ಉಳಿಸಿದ. ದಾನಿಯ ಕೈ ಹಿಡಿದುಕೊಂಡು 'ದೇವರಂಗೆ ಬಂದು ನನ್ನ ಮಗುವನ್ನು ಕಾಪಾಡಿದಿರಿ' ಎಂದನು.

**– ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಜನಾಭಿಪ್ರಾಯ ರೂಪಿಸುವಲ್ಲಿ ಪ್ರಸಾರ ಮಾಧ್ಯಮಗಳ ಪಾತ್ರ

ಅಲ್ಲೊಂದು ಪ್ರಕರಣ ನಡೆದಿದೆ. ಕೂಡಲೇ ಕಾರ್ಯಪ್ರವೃತ್ತವಾದ ಮಾಧ್ಯಮಗಳು ತಂತಮ್ಮ ಮೂಗಿನ ನೇರಕ್ಕೆ ವಿಷಯವನ್ನು ಅರ್ಥೈಸಿಕೊಂಡು ತಮ್ಮದೇ ರೋಚಕವಾದ ಮಾತುಗಳಲ್ಲಿ, ಸಿನಿಮೀಯ ರೀತಿಯಲ್ಲಿ ನಮ್ಮಲ್ಲಿಯೇ ಮೊದಲು ಬಿತ್ತರವಾಗುತ್ತಿರುವ ಬ್ರೇಕಿಂಗ್ ನ್ಯೂಸ್ ಎಂಬಂತೆ ವಿಷಯವನ್ನು ಹೇಳುತ್ತಾರೆ.

ಹಾಗಾದರೆ ಮಾಧ್ಯಮಗಳದ್ದು ತಪ್ಪೇ? ಖಂಡಿತವಾಗಿಯೂ ತಪ್ಪು. ಪ್ರತಿಯೊಂದು ಘಟನೆಗೂ ಮೂರು ಆಯಾಮಗಳಿವೆ. ಒಂದು ನೀನು ನೋಡುವ ದೃಷ್ಟಿ ಮತ್ತೊಂದು ಪರರು ಅದನ್ನು ಅವಲೋಕಿಸುವ ರೀತಿ ಮತ್ತು ಮೂರನೆಯದ್ದು ನಿಜ ಸ್ಥಿತಿ. ಇದರಲ್ಲಿ ಯಾವುದನ್ನು ಹೇಳಬೇಕು? ಎಂಬುದು ಮಿಲಿಯನ್ ಡಾಲರ್ ಪ್ರಶ್ನೆಯಾದರೆ ಉತ್ತರ ಅತ್ಯಂತ ಸರಳ ಮತ್ತು ಸುಲಭ. ಮಾಧ್ಯಮದವರು ಸಂಪೂರ್ಣವಾಗಿ ನಿಜ ಸ್ಥಿತಿಯ ವಿವರವನ್ನು ಇಲ್ಲವೇ ಅದಕ್ಕೆ ಹತ್ತಿರವಾದ ವಿವರವನ್ನು ಬಿತ್ತರಗೊಳಿಸಬೇಕು. ನಾವು ನಂಬಿಕೊಂಡಿರುವುದು ಕೇವಲ ನಮ್ಮ ವೈಯುಕ್ತಿಕ ಅಭಿಪ್ರಾಯ ಬೇರೆಯವರು ನಂಬಿಕೊಂಡಿರುವುದು ಅವರ ವೈಯಕ್ತಿಕ ಅಭಿಪ್ರಾಯ ... ಅದು ಸಾರ್ವತ್ರಿಕವಲ್ಲ. ವಸ್ತುನಿಷ್ಠ ವರದಿ ಮಾತ್ರ ಮಾಧ್ಯಮಗಳ ಕಾರ್ಯ ವ್ಯಾಪ್ತಿಗೆ ಬರಬೇಕು. ನಮಗೆ ಸರಿ ಕಂಡದ್ದೆಲ್ಲ ಜನರ ಅಭಿಪ್ರಾಯವಾಗಿ ರೂಪಿಸುವಲ್ಲಿ ಮಾಧ್ಯಮಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತಿವೆ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು. ಈ ಸಮಾಜದ ಆಗುಹೋಗುಗಳನ್ನು ಸರಿಯಾಗಿ ಅವಲೋಕಿಸುವ, ನಿಷ್ಪಕ್ಷಪಾತವಾಗಿ ವರದಿ ಸಲ್ಲಿಸುವ ಆ ಮೂಲಕ ಸಮಾಜದ ಜನರಿಗೆ ಸರಿಯಾದ ದಾರಿ ತೋರುವ (ಹ್ಯಾಂಡ್ ಸಿಗ್ನಲ್) ಕೈಮರಗಳಾಗಿ, ದಿಕ್ಸೂಚಿಯಾಗಿ ಮಾಧ್ಯಮಗಳು ಕಾರ್ಯ ನಿರ್ವಹಿಸಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಇನ್ನು ಕೆಲ ಮಾಧ್ಯಮಗಳಲ್ಲಿ ತಮ್ಮ ವೈಯುಕ್ತಿಕ ಅಭಿಪ್ರಾಯವನ್ನು ಸಾರ್ವಜನಿಕ ಸಮೀಕ್ಷೆಯ ಮೂಲಕ ತಿಳಿದುಬರುವುದು ಎಂದು ಅತ್ಯಂತ ರೋಚಕವಾಗಿ ಧ್ವನಿಯ ಏರಿಳಿತಗಳ ಮೂಲಕ ಹೇಳಿದಾಗ ಜನರು ಪ್ರಭಾವಿತರಾಗುವುದು ಸಹಜ.

24/7 ಕಾರ್ಯನಿರ್ವಹಿಸುವ ದೃಶ್ಯ ಮಾಧ್ಯಮಗಳು ತಮಗಿರುವ ಹಿರಿದಾದ ಅವಕಾಶವನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗದೆ ಹೋದಾಗ ಒಂದೇ ವಿಷಯವನ್ನು ಪದೇ ಪದೇ ಹೇಳುತ್ತಾ ಒಂದೇ ದೃಶ್ಯವನ್ನು ಪದೇಪದೇ ತೋರಿಸುತ್ತಾ ಮಾತಿನ ಮಂಟಪ ಕಟ್ಟುತ್ತಾರೆ. ಪ್ರಸ್ತುತ ಸಮಾಜದಲ್ಲಿ ವಸ್ತುನಿಷ್ಠತೆಗಿಂತ ಒಣ ಡಂಬಾಚಾರಕ್ಕೆ ಹೆಚ್ಚು ಬೆಲೆ ಇದ್ದು ಜನರು ಕೂಡ ತಮ್ಮ ವೈಯುಕ್ತಿಕ ಜಂಜಾಟಗಳಿಂದ ಕೊಂಚ ಮುಕ್ತಿ ಪಡೆಯಲು ಇಂತಹ ರೋಚಕ ಸುದ್ದಿಗಳ ಮೊರೆ ಹೋಗುವುದು ಅವರ ಪಾಲಿಗೆ ರೋಗಿ ಬಯಸಿದ್ದು ಹಾಲು ಅನ್ನ



ವೈದ್ಯ ಹೇಳುವುದು ಹಾಲು ಅನ್ನ ಎಂಬಂತಾಗುತ್ತದೆ. ಇದರ ಜೊತೆಗೆ ದೃಶ್ಯ ಮಾಧ್ಯಮದವರು ಎದುರಿಸುವ ಬಹುಮುಖ್ಯ ಸಮಸ್ಯೆ ಟಿ ಆರ್ ಪಿ ಯದ್ದು. ತಮ್ಮ ಚಾನಲ್ ನ ಟಿ.ಆರ್.ಪಿ ಹೆಚ್ಚಿಸಲು ಪ್ರತಿಯೊಂದು ಚಾನೆಲ್ ನ ಜನರು ರೋಚಕ ಸುದ್ದಿಗಳನ್ನು ಬೆಂಬತ್ತಿ ಈ ಹಿಂದೆ ನಮ್ಮ ಸಮಾಜದಲ್ಲಿ ಯಾವ ವಿಷಯಗಳನ್ನು ಕುಟುಂಬಗಳಿಂದ, ಮನೆಯ ಮಕ್ಕಳಿಂದ ದೂರವಿಡುತ್ತಿದ್ದರೋ ಅದೇ ವಿಷಯಗಳನ್ನು ಪದೇಪದೇ ಬಿತ್ತರಿಸುವ ಮೂಲಕ ಜನರ ಆಸಕ್ತಿಯನ್ನು ಕೆರಳಿಸುವಲ್ಲಿ ಸಫಲವಾಗಿವೆ. ಇದು ಸಾಮಾಜಿಕ ಮೌಲ್ಯಗಳ ಕುಸಿತಕ್ಕೂ, ಅವನತಿಗೂ ಕಾರಣವಾಗುತ್ತದೆ. ಒಂದು ಆಕಸ್ಮಿಕ ಘಟನೆಯನ್ನು ಥ್ರಿಲ್ಲರ್ ಸ್ಟೋರಿಯಂತೆ ಪದೇ ಪದೇ ತೋರಿಸುವ ಮೂಲಕ ಸಮಾಜದಲ್ಲಿ ಕೇವಲ ಕೆಟ್ಟದ್ದು ಮಾತ್ರ ನಡೆಯುತ್ತದೆ ಎಂಬಂತೆ ಬಿಂಬಿಸುವಲ್ಲಿ ದೃಶ್ಯ ಮಾಧ್ಯಮಗಳು ಸಫಲವಾಗಿದ್ದು ಇದು ನಮ್ಮ ಭಾರತೀಯ ಸಂಸ್ಕೃತಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಈ ವಿಷಯದಲ್ಲಿ ಪತ್ರಿಕೆಗಳು ತುಸು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುತ್ತವೆ. ತಮ್ಮ ಸೀಮಿತತೆಯ ಪರಿಣಾಮವಾಗಿ, ಸ್ಥಳಾವಕಾಶದ ಕೊರತೆಯಿಂದ ಬರಪೂರ ಮಾಹಿತಿಗಳ ಹೆಚ್ಚಳದಿಂದಾಗಿ ಅವರು ಕೇವಲ ಅವಶ್ಯಕತೆ ಇರುವ ಮಾಹಿತಿಗಳನ್ನು ಮಾತ್ರ ಜರಡಿಯಾಡಿ ಸೋಸಿ ಜನರಿಗೆ ಊಣ ಬಡಿಸುತ್ತವೆ. ಮುದ್ರಣ ಮಾಧ್ಯಮವು ಕೇವಲ ಶಬ್ದಗಳನ್ನು ವಾಕ್ಯಗಳಾಗಿ ಬಳಸಿದರೆ ದೃಶ್ಯ ಮಾಧ್ಯಮವು ದೃಶ್ಯ ಸಮೇತವಾಗಿ ವಿಷಯವನ್ನು ರೋಚಕವಾಗಿ ಕಟ್ಟಿಕೊಡುವುದರಿಂದ ಜನರು ಮತ್ತಷ್ಟು ದೃಶ್ಯ ಮಾಧ್ಯಮಗಳತ್ತ ಆಕರ್ಷಿತರಾಗುತ್ತಾರೆ. ಇನ್ನು ಕೆಲವು ವಿತಂಡವಾದಿಗಳು, ಕಡ್ಡಿಯನ್ನು ಗುಡ್ಡ ಮಾಡುವ ಸ್ವಭಾವದವರು, ನಕಾರಾತ್ಮಕತೆಯನ್ನೇ ಹಾಸಿ ಹೊದ್ದು ಕೊಂಡಿರುವವರು ಇಂತಹ ವಿಷಯಗಳ ಮೇಲೆ ಊರ ಹೊರಗಿನ ಕಟ್ಟೆಗಳ ಮೇಲೆ, ಹೋಟೆಲ್ಗಳಲ್ಲಿ ಮತ್ತಿತರ ಹರಟೆಗೆ ಅವಕಾಶವಾಗುವ ಜಾಗಗಳಲ್ಲಿ ಅನಾರೋಗ್ಯಕರ ಚರ್ಚೆಗಳಲ್ಲಿ ತೊಡಗಿ ವಿಷಯಗಳನ್ನು ಮತ್ತಷ್ಟು ವಿಷಮಗೊಳಿಸುತ್ತಾರೆ. ಅವರಿಗೂ ಹೊತ್ತು ಹೋಗಬೇಕಲ್ಲವೇ!!

ಆದರೆ ಭಾರತದಂತಹ ಭವ್ಯ ದೇಶದಲ್ಲಿ ಹಲವಾರು ಜಾತಿ ಮತ ಪಂಥ ಮತ್ತು ಧರ್ಮಗಳ ಬೀಡಿನಲ್ಲಿ ಇಂತಹ ಅನಾರೋಗ್ಯಕರ ವಿಷಯಗಳು ಒಣ ಹುಲ್ಲಿಗೆ ಕಡ್ಡಿ ಗೀರಿದಂತಾಗುತ್ತದೆ.

A spark neglected burns the house ಎಂಬ ಮಾತಿನಂತೆ ಭಾರತಂತ ಬೃಹತ್ ದೇಶದ ಯಾವುದೋ ಪುಟ್ಟ ಹಳ್ಳಿಯಲ್ಲಿ ನಡೆದ ವಿಷಯವೊಂದು ದೇಶ ವ್ಯಾಪಿ ಚರ್ಚೆಯ ವಿಷಯವಾಗಿ ಪರ ವಿರೋಧಗಳು ರೂಪುಗೊಂಡು ಸಾಮಾಜಿಕ ಸಾಮರಸ್ಯಕ್ಕೆ ಕಂಟಕ ತರುವಂತಹ ಅನಪೇಕ್ಷಣೀಯ ಬೆಳವಣಿಗೆಗಳಿಗೆ ಕಾರಣವಾಗುತ್ತದೆ. ಕಪೋಲ ಕಲ್ಪಿತ ಕಥೆಗಳು ಚಾನೆಲ್ ಡಿಸ್ಕಶನ್ ಗಳಲ್ಲಿ ವಿತಂಡವಾದ, ಅಸಭ್ಯವಾದ ಆರೋಪ ಪ್ರತ್ಯಾರೋಪಗಳು ಅನೇಕ ಬಾರಿ ಜನರ ಆಕ್ರೋಶವನ್ನು ಹೆಚ್ಚಿಸುತ್ತವೆ. ಮುಂದೆ ಇವು ಸ್ಥಳೀಯ ಮಟ್ಟದಲ್ಲಿಯೂ ಗಲಭೆಗಳಿಗೆ ಕಾರಣವಾಗಿ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟವಾಗುವ ಮಟ್ಟಿಗೆ ನಮ್ಮನ್ನು ಸುಡುತ್ತದೆ.

ನೆನ್ನೆಯ ತನಕ ಪರಸ್ಪರ ಹೆಗಲ ಮೇಲೆ ಕೈ ಹಾಕಿ ನಡೆಯುವ ಸ್ನೇಹಿತರು ಇಂತಹ ಘಟನೆಗಳ ನಂತರ ಒಬ್ಬರ ಮುಖ ಒಬ್ಬರು ನೋಡದಷ್ಟು ದ್ವೇಷವನ್ನು ಮಾಡುವ ಮಟ್ಟಿಗೆ ವಿಷಯಗಳು ವೈಪರೀತ್ಯಕ್ಕೆಳಸುತ್ತವೆ. ಇದು ಸಮಾಜದ ಶಾಂತಿ, ಸಾಮರಸ್ಯಗಳನ್ನು ಕದಡುತ್ತದೆ. ಆದರೆ ಹಾಗೆ ಟಿವಿ ಚಾನೆಲ್ ಗಳಲ್ಲಿ ಕಿವಿ ಕಿತ್ತು ಹೋಗುವಂತೆ ಗುದ್ದಾಡಿದ ಪರಸ್ಪರ ವಿರೋಧಿಗಳು ಕ್ಯಾಮರಾ ಕಣ್ಣಿನಿಂದ ಮರೆಯಾದ ಕೂಡಲೇ ಜೊತೆಯಾಗಿ ತಿಂಡಿ ತಿನ್ನುತ್ತಾರೆ.

ಕೇವಲ ಒಂದು ಕ್ಷಣದ ಕಹಿ ಘಟನೆ ಯಾವ ರೀತಿ ನಮ್ಮ ಸಂಸಾರದ ಸಾವಿರಾರು ಸವಿ ಕ್ಷಣಗಳನ್ನು ಮರೆ ಮಾಡುವುದಿಲ್ಲವೋ ಅಂತೆಯೇ ಭಾರತ ದೇಶವೆಂಬ ಬೃಹತ್ ಸಂಸಾರದಲ್ಲಿ ನಡೆಯುವ ಎಲ್ಲ ಘಟನೆಗಳು ಎಲ್ಲರಿಗೂ ಅನ್ವಯವಾಗಲೇಬೇಕೆಂದಿಲ್ಲ. ಎಲ್ಲರೂ ಪರಸ್ಪರ ಶಾಂತಿ ನೆಮ್ಮದಿ ಸಹಬಾಳ್ವೆಯ ಜೀವನವನ್ನು ನಡೆಸಲು ಅನುವಾಗುವಂತೆ ಮಾಧ್ಯಮಗಳು ಪ್ರಬುದ್ಧವಾಗಿ ಕಾರ್ಯನಿರ್ವಹಿಸಲೇಬೇಕು.

ಇದನ್ನು ಮನಗಂಡೇ ಪೂರ್ವ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ತಮ್ಮ ಸಮಾನ ಮನಸ್ಕ ಸ್ನೇಹಿತರ ಗುಂಪಿನಲ್ಲಿ ನಮ್ಮ ಕನ್ನಡದ ಹೆಮ್ಮೆಯ ಪುತ್ರ ಗುರುರಾಜ ಕರಜಗಿ ಅವರ ಜೊತೆಗೂಡಿ ಗುಡ್ ಎಂಬ ಇ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಜಗತ್ತಿನಲ್ಲಿ ನಡೆಯುವ ಒಳ್ಳೆಯ ವಿಷಯಗಳನ್ನು ಮಾತ್ರವೇ ಸಾದರಪಡಿಸುವ ಮೂಲಕ ಈ ಸಮಾಜದಲ್ಲಿ ಇನ್ನೂ ಒಳ್ಳೆಯದು ಇದೆ ಮತ್ತು ಒಳ್ಳೆಯದನ್ನು ಪ್ರೋತ್ಸಾಹಿಸಬೇಕು ಎಂಬ ಸದುದ್ದೇಶವನ್ನು ಈ ಪತ್ರಿಕೆ ಹೊಂದಿತ್ತು.

ಒಂದಿಡೀ ಸಮಾಜದ ಚಿಂತನ ವಿಧಿಯನ್ನೇ ಬದಲಾಯಿಸುವ ಗುರುತರ ಜವಾಬ್ದಾರಿ ಮಾಧ್ಯಮಗಳ ಮೇಲಿದೆ. ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುವಲ್ಲಿ ಮಾಧ್ಯಮಗಳ ಪಾತ್ರ ಹಿರಿದಾದುದು. ಅಂತೆಯೇ ತಮ್ಮ ಲಾಭಕ್ಕಾಗಿ ಜನರನ್ನು ತಪ್ಪು ದಾರಿಗೆಳೆಯದೆ ವಸ್ತುನಿಷ್ಠ ವರದಿಗಳನ್ನು ನೀಡುವ ಮೂಲಕ ಅವರವರ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವ ಮೂಲಕ ಸಶಕ್ತ ದೇಶವನ್ನು ಕಟ್ಟುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿ ಎಂದು ವಿನಮ್ರವಾಗಿ ಕೇಳಿಕೊಳ್ಳುವ.

(ತಮಗೆ ಬೇಡವಾದ ಅನವಶ್ಯಕ ಮಾಹಿತಿಗಳ ಅವಶ್ಯಕತೆ ಜನರಿಗೂ ಇಲ್ಲ ಎಂದು ತೋರಿದಾಗ ತಾವು ಮಾಹಿತಿಗಳನ್ನು ನೋಡಲು ಬಳಸುವ ಚಾನಲ್ ಬದಲಿಸಬಹುದು, ಆಯ್ಕೆ ಮತ್ತು ಹಕ್ಕುಗಳು ಕೇವಲ ವೀಕ್ಷಕರದು ಎಂಬ ಅರಿವು ನಮಗೂ ಇರಬೇಕು)

# ಪ್ರತಿದಿನವಾಗಲಿ ಪುಸ್ತಕದಿನ

**"ನಹಿ ಜ್ಞಾನೇನ ಸದೃಶ್ಯಂ, ಪವಿತ್ರ ಮಿಹ ವಿದ್ಯತೇ".**

ಇದು ನಮಗೆಲ್ಲಾ ಚಿರಪಚಿತವಾದ ಗೀತೆಯ ವಾಕ್ಯ. ಇದು ಜ್ಞಾನದ ಅರಿವು, ತಿಳಿವಳಿಕೆಯ ಮಹತ್ವವನ್ನು ಎತ್ತಿ ಹಿಡಿಯುವುದು. ಜೀವನವೇ ಒಂದು ಅಧ್ಯಾಯವಾದರೆ, ನಾವು ಸತತವಾಗಿ, ಪ್ರತಿ ಕ್ಷಣವೂ ಕಲಿಯುತ್ತಿರುತ್ತೇವೆ. ಇದು ನಮಗೆ ಪ್ರಾಕೃತಿಕವಾಗಿ ಒದಗುವ ಅನೌಪಚಾರಿಕ ಕಲಿಕೆಯಾಯಿತು. ಪುಸ್ತಕ, ಪಠ್ಯ ರೂಪದಲ್ಲಿ ಕಲಿವ ಔಪಚಾರಿಕ ಕಲಿಕೆಯು, ನಿರ್ದಿಷ್ಟ ವಿಷಯಗಳನ್ನು ತಿಳಿಸುವುದು. ಅವು ಪುಸ್ತಕ ರೂಪದಲ್ಲಿ ಇರಬಹುದು. ಮೊಲದಲಾದರೆ ತಾಳಗರಿ ರೂಪದಲ್ಲಿ ನಾವು ಪುಸ್ತಕಗಳು ಇರುವುದು ತಿಳಿದೇ ಇದೆ. .

ನನ್ನ ಅನಿಸಿಕೆಯಂತೆ, ಪ್ರತಿದಿನವೂ ಅಭ್ಯಾಸ ಮಾಡುವ ಪುಸ್ತಕಕ್ಕೆ ಯಾವ ದಿನವೂ ಬೇಡ. ಯಾಕೆಂದರೆ, ಓದುವ ಹಂಬಲ ಇರುವವರಿಗೆ, ಪ್ರತಿದಿನವೂ ಪುಸ್ತಕ ದಿನವೇ!!ಇತ್ತೀಚಿನ ದಿನಮಾನಕ್ಕೆ ತಕ್ಕಂತೆ, ಅಥವಾ ಅದರದೇ ಆದ ನೀತಿ ನಿಯಮಗಳನ್ನು ಜಾರಿಗೆ ತಂದು, ಮೂಲ ಲೇಖಕರ ಪುಸ್ತಕಗಳ ಹಕ್ಕು ಸ್ವಾಮ್ಯಗಳನ್ನು ರಕ್ಷಿಸಲು, ಪುಸ್ತಕ ದಿನವನ್ನು ಇದನ್ನು ಜಾರಿಗೆ ತಂದಿದ್ದಾರೆ. ಗೂಗಲ್ ಮಾಹಿತಿಯ ಪ್ರಕಾರ, ಓದುವಿಕೆಯ ಉತ್ತೇಜನಕ್ಕೆ, ಪ್ರಕಾಶನ, ಹಕ್ಕುಸ್ವಾಮ್ಯ ಉತ್ತೇಜಿಸಲು, "ಯುನೆಸ್ಕೋ"ಆಯೋಜಿಸುವ ವಾರ್ಷಿಕ ಕಾರ್ಯಕ್ರಮ ಇದಾಗಿದೆ. ಇದನ್ನು ಆಚರಿಸತೊಡಗಿದ್ದು, 1995ಎಪ್ರಿಲ್ 23ರಿಂದ ಆಚರಿಸಲಾಗುತ್ತಿದೆ. ನಂತರ ಮುಂದುವರೆದು, ಪುಸ್ತಕ ವಲಯದ ಸಲಹೆಯಂತೆ, ಒಂದೊಂದು ಧ್ಯೇಯದೊಂದಿಗೆ, "ವಿಶ್ವ ಪಸ್ತಕ ರಾಜಧಾನಿ"ಯನ್ನಾಗಿ ಆಯ್ಕೆ ಮಾಡುಲಾಗುತ್ತಿದೆ. 2023ನೇ ವರ್ಷದ ಸಾಲಿನಲ್ಲಿ, ಘಾನಾ ರಾಜಧಾನಿಯಾದ, "ಆಕ್ರಾ"ವನ್ನು ,ವಿಶ್ವದ ಪುಸ್ತಕ ರಾಜಧಾನಿಯಾಗಿ ಆಯ್ಕೆ ಮಾಡಲಾಗಿತ್ತು. 2024 ರ ವಿಶ್ವ ಪುಸ್ತಕ ರಾಜಧಾನಿ, ಫ್ರಾನ್ಸ್ ನ ಸ್ಟ್ರಾಸ್ಬರ್ಗ್ ಸಿಟಿ ಯನ್ನು ಆಯ್ಕೆ ಮಾಡಲಾಗಿದೆ. ಈ ಸಾಲಿನ ಧ್ಯೇಯ ವಾಕ್ಯ "ನಿಮ್ಮ ಮಾರ್ಗವನ್ನು ಓದಿ" ಎಂಬುದಾಗಿದೆ.



ಲೀಲಾವತಿ ಶಿವನಗೌಡ್ರು,
ಅಂಕಸಮುದ್ರ, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

"ಒಂದು ಪುಸ್ತಕ ನೂರು ಸ್ನೇಹಿತರಿಗೆ ಸಮ" ಎಂಬ ಗಾದೆಯಂತೆ, ಪುಸ್ತಕದ ಜೊತೆ ಸಖ್ಯ ಮಾಡಿಕೊಂಡವರು, ಬಸ್, ರೈಲಲ್ಲಿರಲಿ, ಎಲ್ಲಿಯೇ ಹೋಗಲಿ ಅವರಿಗೆ ಒಂಟಿತನ, ಬೇಸರಿಕೆ ಆಗುವುದಿಲ್ಲ. ಕಾರಣ, ಅವರ ಜೊತೆಗಾರನಾಗಿ, ಜ್ಞಾನ ನಿಧಿಯಾದ ಪುಸ್ತಕವೇ ಇರುವುದು. ಜೊತೆಗೆ ಪುಸ್ತಕ ಜೊತೆಗೆ ಅತಿಯಾದ ಸ್ನೇಹ ಬೆಳೆಸಿಕೊಂಡವರಿಗೆ, ಸ್ನೇಹಿತರ ಅತ್ಯಾವಶ್ಯಕತೆಯೂ ಇರುವುದಿಲ್ಲ. ಏಕಾಂಗಿಯಾಗಿದ್ದುಕೊಂಡು ಸಂತಸವಾಗಿರಬಲ್ಲರು. ಅವರ ಜೊತೆ, ಇವರ ಜೊತೆ ಮಾತಾಡಿ ಮಾತಾಡಿ, ಜಗತ್ತಿನ ಸಮಸ್ತ 'ವಿಷ'ಯಗಳನ್ನು ತಲೆಯಲ್ಲಿ ಇರಿಸಿಕೊಳ್ಳುವುದಕ್ಕಿಂತ, ಉತ್ತಮ ವಿಚಾರಗಳನ್ನು ತಲೆಗೆ ತುಂಬುವ ಪುಸ್ತಕಗಳೇ, ಮನುಜನ ನೈಜ ಸ್ನೇಹಿತ."ದೇಶ ಸುತ್ತಿ ನೋಡು, ಕೋಶ ಓದಿ ನೋಡು" ಎಂಬ ಗಾದೆಯಂತೆ, ಎಲ್ಲರಿಗೂ ದೇಶ ಸುತ್ತಲು ಸಾಧ್ಯವಿಲ್ಲ. ಆದರೆ ವಿಶ್ವಕೋಶವನ್ನೆ ತನ್ನೊಳಗಿಟ್ಟಕೊಂಡು ಮಾಹಿತಿ ಆಧಾರಿತ ಪುಸ್ತಕಗಳು, ಕೃತಿ–ಕಾದಂಬರಿಗಳು ಕಣ್ಣಿಗೆ ಕಟ್ಟುವಂತಹ, ಅನೇಕ ಮಾಹಿತಿಗಳನ್ನು ಒದಗಿಸುತ್ತವೆ.

ಉದಾಹರಣೆ, ಎಸ್.ಎಲ್.ಬೈರಪ್ಪ ಅವರ ಅನೇಕ ಕೃತಿಗಳು, ನಮಗೆ ಎಲ್ಲೂ ಸಿಗದ, ಅನೇಕ ಮಾಹಿತಿಗಳನ್ನು ನೀಡುತ್ತವೆ. ಕುವೆಂಪು ಅವರ ಆತ್ಮಚರಿತ್ರೆ, ಅಂದಿನ ಜನಜೀವನದ ಚಿತ್ರಣ, ಅವರ ಶಿಕ್ಷಣ ಎಲ್ಲವನ್ನೂ ಸವಿವರವಾಗಿ ತಿಳಿಸುವುದು. ಹಾಗೆಯೇ ತೇಜಸ್ವಿ ಅವರ ಅನೇಕ ಕೃತಿಗಳಿಂದ, ಪರಿಸರದೊಂದಿಗಿನ ಸಹಜ ಬದುಕು, ಅಂಡಮಾನಿನ ನೈಜ ಜೀವನ, "ಅಣ್ಣನ ನೆನಪು"ನಲ್ಲಿ ಅವರ ವಿದ್ಯಾರ್ಥಿ ಜೀವನದ ಕಥೆ, ಅನೇಕ ಪರಿಸರಕ್ಕೆ ಸಂಬಂಧಿಸಿದ ಕಥಾ ಘಟನೆಗಳು, ಅವರು ಕಾಡಿನ ಪರಿಸರದಲ್ಲಿ ಬದುಕಿದ ಬಗೆ, ಅಲ್ಲಿನ ಜನರೊಂದಿಗೆ ಸಾಮಾನ್ಯವಾಗಿ ಬೆರೆಯುತ್ತಿದ್ದ ರೀತಿ, ಹೀಗೆ ನಾವು ಹತ್ತು ಹಲವು ವಿಷಯ ತಿಳಿಯುತ್ತೆವೆ. ಮಾಸ್ತಿ ಅವರ ಕಥನ ಕಾವ್ಯಗಳು. ನೃತ್ಯಶಾಸ್ತ್ರ, ಕಲೆ–ವಾಸ್ತುವಿಗೆ ಸಂಬಂಧಿಸಿದ ಅನೇಕ ಋಷಿಗಳ ತಿಳುವಳಿಕೆ. ಇದೆಲ್ಲಾ ನಮಗೆ ಗೊತ್ತಾಗಲು ಕಾರಣ, ಕನ್ನಡ ನಾಡಿನ ಅನೇಕ ಮಹನೀಯ ಕವಿಗಳು, ತಮ್ಮ ಅಭಿಪ್ರಾಯ ಎಲ್ಲವನ್ನೂ ಅಕ್ಷರದಲ್ಲಿ ಬರೆದು, ಪುಸ್ತಕದಲ್ಲಿ ರೂಪದಲ್ಲಿ ನಮಗೆ ಕೊಟ್ಟಿದ್ದರಿಂದಲೇ, ಇಂದು ನಮಗೆ ಅನೇಕ ಮಹತ್ವದ ವಿಷಯಗಳೆಲ್ಲಾ ತಿಳಿದು ಬರುತ್ತಿದೆ.

ಮೊದಲು ನಮ್ಮ ದೇಶದಲ್ಲಿ ತಾಳೆಗರಿಗಳು ಮತ್ತು ಭೋಜ ಪತ್ರಗಳು ಒಟ್ಟು ಸಂಗ್ರಹಿತವಾಗಿ ಪುಸ್ತಕವಾಗಿದ್ದವು. ಕೆಲವೆಡೆ, ಅಂದರೆ ಛಪನ್ನಾರು ದೇಶಗಳಲ್ಲಿ ಒಂದಾದ, ಭೋಜ ದೇಶದಲ್ಲಿ"ಭೋಜ ಪತ್ರ"ದ ಮೇಲೆ ಬರೆಯುತ್ತಿದ್ದರು. ಅಂದರೆ ಪ್ರಾಚೀನ ಕಾಲದ ರಾಜರ ಆಳ್ವಿಕೆಯಲ್ಲಿ, ದಾಖಲೆಗಳಿಗೆ ಸಂಬಂಧಿಸಿದ ದಸ್ತಾವೇಜು ಇತ್ಯಾದಿಗಳನ್ನು ಬರೆಯಲು,"ಭೋಜ ಮರ"ದ ಹಾಳೆಯಂತಹ ತೊಗಟೆಯು, ದಾಖಲೆಗಳನ್ನು ಸಂಗ್ರಹಿಸಲು ಬೇಕಾಗುತ್ತಿತ್ತು. ಇದರ ಮೇಲೆ,"ಪಾಂಡುಲಿಪಿ"



ಬರೆಯುತ್ತಿದ್ದರು, ಎಂಬ ಮಾಹಿತಿ ನಮ್ಮ ಗುರುಗಳಿಂದ ತಿಳಿದುಬಂತು. ನಿಜಕ್ಕೂ ನಾವು ಭಾರತೀಯರು, ನಮ್ಮ ಪ್ರಾಚೀನರ ಬಗ್ಗೆ ಹೆಮ್ಮೆ–ಗೌರವ ಪಡಲೇಬೇಕು. ಏಕೆಂದರೆ ಇಂದು ನಾವು, ಅನೇಕ ಕೃತಿಗಳನ್ನು ಪುಸ್ತಕ ರೂಪದಲ್ಲಿ, ಈ–ಪುಸ್ತಕ ರೂಪದಲ್ಲಿ ನೋಡುವ ನಾವು, ಪ್ರಾಚೀನಕಾಲದಲ್ಲಿ ಈಗ ನಮಗೆ ಪರಿಚಯವೇ ಇರದ, ಪ್ರಾಕೃತಿ, ಪಾಲಿ, ಪಾಂಡು ಲಿಪಿ, ಶಾರದಾ ಲಿಪಿ, ಹೀಗೆ ಅನೇಕ ಬಗೆಯ ಲಿಪಿಯಲ್ಲಿ , ತಮ್ಮ ಕೃತಿ ವಿಚಾರಧಾರೆಗಳನ್ನು ತಾಳೆಗರಿ ಪುಸ್ತಕ, ಭೋಜ ಪತ್ರದ ಪುಸ್ತಕದಲ್ಲಿ ಬರವಣಿಗೆ ಯಲ್ಲಿ ಸಂಗ್ರಹಿಸಿ, ಮುಂದಿನ ಪೀಳಿಗೆಗೆ ಜ್ಞಾನ ಧಾರೆ ಎರೆದಿದ್ದಾರೆ. ನಮ್ಮ ಪೂರ್ವಿಕರ ಬಗ್ಗೆ ನಿಜಕ್ಕೂ ಹೆಮ್ಮೆಯೇ ಮೂಡುವುದು!!

ಜೊತೆಗೆ ನಿರರ್ಗಳವಾಗಿ ಆಳವಾದ ವಿಷಯಗಳನ್ನು, ಕೂಲಂಕಷವಾಗಿ ಮಾತಾಡುತ್ತಾರೆ, ನಿರರ್ಗಳವಾಗಿ ಪದಸಂಪತ್ತು ಬಳಸುತ್ತಾರೆ ಅಂದರೆ, ಅವರು ಹೆಚ್ಚು ಹೆಚ್ಚು ಪುಸ್ತಕ ಓದಿದ್ದಾರೆ ಎಂದೇ ಅರ್ಥ. ಪುಸ್ತಕ ಓದುವುದರಿಂದ, ಓದುವುದೆಂದರೆ ಅರ್ಥೈಸಿಕೊಳ್ಳುವುದರಿಂದ ಪದ/ಶಬ್ದ ಭಂಡಾರ ಹೆಚ್ಚಾಗುವುದರೊಂದಿಗೆ, ನಿರ್ದಿಷ್ಟ ವಿಷಯದ ಬಗ್ಗೆ ಆತ್ಮವಿಶ್ವಾಸದೊಂದಿಗೆ ಮಾಡನಾಡಬಹುದು. ಪುಸ್ತಕ ಪ್ರಪಂಚಕ್ಕೆ ನಮ್ಮನ್ನು ನಾವು ತೆರೆದುಕೊಂಡರೆ, ಜಗತ್ತಿನ ಅನೇಕ ಮಾಹಿತಿಗಳನ್ನು ಪುಸ್ತಕ ನಮಗ ತೆರೆದಿಡುವುದು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Join for vijayanagara dist. updates

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates

# ಅಂತಿಮ ಕಣದಲ್ಲಿ 10 ಅಭ್ಯರ್ಥಿಗಳು

## ಬಳ್ಳಾರಿ ಡಿಸಿ ಮಿಶ್ರಾ ಹೇಳಿಕೆ | ಅಕ್ರಮ ತಡೆಯಲು 1950 ಟೋಲ್ ಫ್ರೀ ಬಳಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ (ಪ.ಪಂ) ಲೋಕಸಭಾ ಚುನಾವಣೆಗೆ ಸಲ್ಲಿಕೆಯಾಗಿದ್ದ ನಾಮಪತ್ರಗಳನ್ನು ಹಿಂಪಡೆಯುವ ದಿನವಾದ ಸೋಮವಾರ ದಂದು, ಓರ್ವ ಅಭ್ಯರ್ಥಿಯು ತಮ್ಮ ಉಮೇದುವಾರಿಕೆಯನ್ನು ವಾಪಸ್ ತೆಗೆದುಕೊಂಡಿದ್ದು, ಅಂತಿಮ ಕಣದಲ್ಲಿ 10 ಅಭ್ಯರ್ಥಿಗಳು ಇದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದ ಕೆಸ್ವಾನ್ ವಿಡಿಯೋ (ವಿಸಿ ಹಾಲ್) ಸಭಾಂಗಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯುದ್ದೇಶಿಸಿ ಮಾತನಾಡಿದರು.



ಏ.12 ರಿಂದ 19 ರವರೆಗೆ ನಾಮಪತ್ರ ಸಲ್ಲಿಕೆಯ ಅವಧಿಯಲ್ಲಿ ಒಟ್ಟು 11 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಏ.20 ರಂದು ನಡೆದ ನಾಮಪತ್ರಗಳ ಪರಿಶೀಲನೆಯಲ್ಲಿ 11 ಅಭ್ಯರ್ಥಿಗಳ ನಾಮಪತ್ರಗಳು ಕ್ರಮವಾಗಿದ್ದವು. ನಾಮಪತ್ರ ವಾಪಸ್ಸು ಪಡೆಯುವ ದಿನವಾದ ಏ.22 (ಸೋಮವಾರ) ರಂದು ಪಕ್ಷೇತರ ಅಭ್ಯರ್ಥಿ ಬಿ.ಭಾಗ್ಯಲಕ್ಷ್ಮಿ ತಮ್ಮ ಉಮೇದುವಾರಿಕೆಯನ್ನು ಹಿಂಪಡೆದಿದ್ದಾರೆ ಎಂದು ತಿಳಿಸಿದರು.

**ಅಂತಿಮ ಕಣದಲ್ಲಿ 10 ಅಭ್ಯರ್ಥಿಗಳು:**

ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳಾದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ತುಕಾರಾಮ್, ಬಹುಜನ ಸಮಾಜ ಪಾರ್ಟಿಯ ಅಭ್ಯರ್ಥಿ ವಾಲ್ಮೀಕಿ ಕೃಷ್ಣಪ್ಪ, ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಬಿ.ಶ್ರೀರಾಮುಲು, ಅದೇರೀತಿಯಾಗಿ ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಾದ (ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳನ್ನು ಹೊರತುಪಡಿಸಿ) ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ಸಿ.ಚನ್ನವೀರ, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಷ್ಟ್) ಪಕ್ಷದ ಅಭ್ಯರ್ಥಿ ಎ.ದೇವದಾಸ್, ಪ್ರಹರ್ ಜನಶಕ್ತಿ ಪಾರ್ಟಿಯ ಅಭ್ಯರ್ಥಿ ಮಂಜಪ್ಪ, ನವಭಾರತ್ ಸೇನ ಪಕ್ಷದ ಅಭ್ಯರ್ಥಿ ಜಿ.ಸ್ವಾಮಿ ಮತ್ತು ಪಕ್ಷೇತರ ಅಭ್ಯರ್ಥಿಗಳಾದ ಅರುಣ್ ಎಸ್ ಹಿರೇಹಾಳ್, ವೈ.ಪಂಪಾಪತಿ, ವೀರೇಶ ಅಂತಿಮ ಕಣದಲ್ಲಿರುವ ಅಭ್ಯರ್ಥಿಗಳಾಗಿದ್ದಾರೆ ಎಂದು ವಿವರಿಸಿದರು. ಈಗಾಗಲೇ ಪಕ್ಷೇತರ ಅಭ್ಯರ್ಥಿಗಳಿಗೆ ಚಿಹ್ನೆ ಕೂಡ ಹಂಚಿಕೆ ಮಾಡಲಾಗಿದ್ದು, ಮೇ 07 ರಂದು ಮತದಾನ ನಡೆಯಲಿದೆ ಎಂದರು.

**ಮತದಾನ ದಿನದಂದು ಅಗತ್ಯ ವ್ಯವಸ್ಥೆ:**

ಬೇಸಿಗೆ ಬಿಸಿಲಿರುವುದರಿಂದ ಮತದಾನ ದಿನದಂದು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಮತಗಟ್ಟೆಗಳಲ್ಲಿ ಮತದಾರರು ನಿಲ್ಲಲು ನೆರಳು ಇಲ್ಲದಿರುವೆಡೆ ಶ್ಯಾಮಿಯಾನ ವ್ಯವಸ್ಥೆ ಮಾಡಲಾಗುವುದು ಅಲ್ಲದೆ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಹಾಗೂ ಇತರೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಮತದಾರರನ್ನು ಮತಗಟ್ಟೆಗೆ ಸೆಳೆಯಲು 40 ಸಖಿ ಮಹಿಳಾ ಮತಗಟ್ಟೆಗಳು, 12 ಎಥ್ನಿಕ್, 08 ವಿಶೇಷಚೇತನ ಹಾಗೂ 08 ಯುವ ಮತಗಟ್ಟೆಗಳು, ಥೀಮ್ ಆಧಾರಿತ 8 ಮತಗಟ್ಟೆ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದರು.

ಜಿಲ್ಲೆಯ ಮತದಾನ ಪ್ರಮಾಣ ಹೆಚ್ಚಿಸಲು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಈಗಾಗಲೇ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ ಎಂದು ತಿಳಿಸಿದರು.

**ಚುನಾವಣಾ ಅಕ್ರಮ ತಡೆಯಲು 1950 ಟೋಲ್ ಫ್ರೀ ಸಂಖ್ಯೆ ಬಳಸಿ:**

ಚುನಾವಣಾ ಅಕ್ರಮಗಳಿಗೆ ಸಂಬಂಧಿಸಿದಂತೆ ಮಾದರಿ ನೀತಿ ಸಂಹಿತೆ ಉಲ್ಲಂಘನೆ, ಹಣ–ಉಡುಗೋರೆ ಹಂಚುವುದು ಹಾಗೂ ಚುನಾವಣೆ ಸಂಬಂಧಿತ ಇತರೆ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1950 ಗೆ ಕರೆ ಮಾಡಿ ಮಾಹಿತಿ ನೀಡಬಹುದು ಅಥವಾ ಸಿ–ವಿಜಿಲ್ ಆಪ್ ಮೂಲಕ ದೂರು ಸಲ್ಲಿಸಬಹುದು ಎಂದರು.

**ಚುನಾವಣಾ ಕಾರ್ಯಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳುವಂತಿಲ್ಲ:**

ಚುನಾವಣೆ ಕಾರ್ಯ ಮತ್ತು ಪ್ರಚಾರ ಕಾರ್ಯಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಬಳಸಿಕೊಳ್ಳದಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ ಹಾಗೂ ಚುನಾವಣಾ ಆಯೋಗದ ನಿರ್ದೇಶನವಿದ್ದು, ಯಾವುದೇ ಪಕ್ಷಗಳು ಅಥವಾ ಅಭ್ಯರ್ಥಿಗಳು 18 ವರ್ಷದೊಳಗಿನ ಮಕ್ಕಳನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡಲ್ಲಿ ಕಾಯ್ದೆಯನ್ವಯ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಡಿಸಿ ಮಿಶ್ರಾ ಅವರು ಖಡಕ್ ಸೂಚನೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯ ಸಿಬ್ಬಂದಿಗಳು ಇದ್ದರು.

# ಶ್ರೀ ಪಂಪ ವಿರೂಪಾಕ್ಷೇಶ್ವರ – ಪಾರ್ವತಿಯ ಕಲ್ಯಾಣೋತ್ಸವ



ದಕ್ಷಿಣ ಕಾಶಿ ಹಂಪಿಯಲ್ಲಿ ಭಾನು ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಶ್ರೀ ಪಂಪ ವಿರೂಪಾಕ್ಷೇಶ್ವರ ಹಾಗೂ ಪಾರ್ವತಿಯ ಕಲ್ಯಾಣೋತ್ಸವ ಕಾರ್ಯಕ್ರಮ ನಡೆಸಲಾಯಿತು. ಶಿವ ಪಾರ್ವತಿಯ ಕಲ್ಯಾಣೋತ್ಸವವನ್ನು ಭಕ್ತರು ಶ್ರದ್ಧಾಭಕ್ತಿಯಿಂದ ಕಣ್ತುಂಬಿಕೊಂಡರು.

# ವಿಜ್ಞಾನ

## ಚಂದ್ರನಲ್ಲೇಕೆ ಕುಳಿಗಳಿವೆ?

■ **ಆರ್.ಬಿ.ಗುರುಬಸವರಾಜ**

ಬೇಸಿಗೆಯ ರಾತ್ರಿ ತಾತನ ಜೊತೆಗೆ ಟೇರೇಸ್ ಮೇಲೆ ಮಲಗಿದ್ದ ಶಿವರಾಜ ಚಂದ್ರನನ್ನು ನೋಡುತ್ತಾ ಮಲಗಿದ್ದ. ಹುಣ್ಣಿಮೆಯ ದಿನವಾದ್ದರಿಂದ ಪೂರ್ಣ ಚಂದ್ರನ ಹೊಳೆಯುವ ಮುಖ ಕಾಣುತ್ತಿತ್ತು. ತದೇಕಚಿತ್ತದಿಂದ ಚಂದ್ರನನ್ನು ನೋಡುತ್ತಿರುವಾಗ ತಟ್ಟನೆ ಪ್ರಶ್ನೆಯೊಂದು ಮೂಡಿತು. "ತಾತ, ಚಂದ್ರನ ಮೇಲೆ ಕಲೆಗಳು ಏಕೆ ಉಂಟಾದವು?" ಎಂದ. 'ಅವು ಕಲೆಗಳಲ್ಲ, ಕುಳಿಗಳು' ಎಂದ ತಾತ. "ಏನು! ಕುಳಿಗಳಾ? ಅವು ಏಕೆ ಉಂಟಾದವು?" ಎಂದು ಮರುಪ್ರಶ್ನೆ ಹಾಕಿದ. ತಾತ ಮಲಗಿಕೊಂಡೇ ಉತ್ತರಿಸತೊಡಗಿದ.

ಚಂದ್ರನ ಮೇಲ್ಮೈ ಮೇಲೆ ವಿವಿಧ ಗಾತ್ರದ ಕುಳಿಗಳಿವೆ. ಇವು ಉಲ್ಕೆಗಳು ಮತ್ತು ಕ್ಷುದ್ರಗ್ರಹಗಳ ಪ್ರಭಾವದಿಂದ ರೂಪುಗೊಂಡಿವೆ. ಉಲ್ಕೆ ಅಥವಾ ಕ್ಷುದ್ರಗ್ರಹವು ಚಂದ್ರನ ಮೇಲ್ಮೈಗೆ ಅಪ್ಪಳಿಸಿದಾಗ ಅದು ಅಪಾರ ಪ್ರಮಾಣದ ಶಕ್ತಿಯನ್ನು ಬಿಡುಗಡೆ ಮಾಡುತ್ತದೆ. ಈ ಅಪ್ಪಳಿಸುವಿಕೆ ಚಂದ್ರನಲ್ಲಿ ಕುಳಿಗಳನ್ನು ಉಂಟುಮಾಡುತ್ತದೆ. ಅಪ್ಪಳಿಸುವ ವಸ್ತುವಿನ ವೇಗ, ಗಾತ್ರದ ಆಧಾರದ ಮೇಲೆ ಕುಳಿಗಳ ಗಾತ್ರ ಮತ್ತು ವಿಸ್ತಾರ ನಿರ್ಧಾರವಾಗುತ್ತದೆ.



ಚಂದ್ರನ ಮೇಲ್ಮೈ ಮೇಲೆ ಶತಕೋಟಿ ವರ್ಷಗಳಿಂದ ಉಲ್ಕೆಗಳು ಮತ್ತು ಕ್ಷುದ್ರಗ್ರಹಗಳು ಅಪ್ಪಳಿಸಿವೆ. ಭೂಮಿಯಂತೆ ಚಂದ್ರನಿಗೆ ವಾತಾವರಣ ಇಲ್ಲದಿರುವುದು ಕುಳಿಗಳ ರಚನೆಗೆ ಕಾರಣವಾಗಿದೆ. ಭೂಮಿಗೆ ವಾತಾವರಣ ಇರುವುದರಿಂದ ಭೂಮಿಗೆ ಅಪ್ಪಳಿಸುವ ಬಹುತೇಕ ಉಲ್ಕೆ ಮತ್ತು ಕ್ಷುದ್ರಗ್ರಹಗಳು ಸುಟ್ಟು ನಾಶವಾಗುತ್ತವೆ. ಆದರೆ ಚಂದ್ರನಿಗೆ ವಾತಾವರಣ ಇಲ್ಲದೇ ಇರುವುದರಿಂದ ಉಲ್ಕೆಗಳು ಮತ್ತು ಕ್ಷುದ್ರಗಹಗಳು ಸುಟ್ಟು ನಾಶವಾಗದೇ ಚಂದ್ರನ ಮೇಲ್ಮೈಯನ್ನು ಸ್ಫೋಟಗೊಳಿಸಿವೆ. ಇದರ ಪರಿಣಾಮವಾಗಿ ಚಂದ್ರನ ಮೇಲ್ಮೈಯಿಂದ ಕಲ್ಲು ಮತ್ತು ಮಣ್ಣು ಛಿದ್ರಗೊಂಡು ಕುಳಿಗಳು ಉಂಟಾಗಿವೆ.

ಕಾಲಾನಂತರದಲ್ಲಿ ಚಂದ್ರನ ಕುಳಿಗಳು ಮೇಲ್ಮೈ ಸವೆತ, ಭೂಕುಸಿತಗಳು ಮತ್ತು ಜ್ವಾಲಾಮುಖಿ ಚಟುವಟಿಕೆಗಳಂತಹ ಇತರ ಪ್ರಕ್ರಿಯೆಗಳಿಂದ ಮತ್ತಷ್ಟು ಮಾರ್ಪಾಟು ಹೊಂದಿವೆ. ಚಂದ್ರನ ಕುಳಿಗಳು ಸೌರವ್ಯೂಹದ ಇತಿಹಾಸದ ಬಗ್ಗೆ ನಮಗೆ ಸುಳಿವುಗಳನ್ನು ನೀಡಬಹುದು. ವಿಜ್ಞಾನಿಗಳು ಚಂದ್ರನ ಮೇಲಿನ ಕುಳಿಗಳ ಗಾತ್ರ, ಹಂಚಿಕೆ ಮತ್ತು ಆವರ್ತನವನ್ನು ಅಧ್ಯಯನ ಮಾಡುವ ಮೂಲಕ ವಿವಿಧ ಪ್ರದೇಶಗಳ ವಯಸ್ಸನ್ನು ಅಂದಾಜು ಮಾಡುತ್ತಿದ್ದಾರೆ. ಇಲ್ಲಿನ ಕುಳಿಗಳ ಮೂಲಕ ಸೌರವ್ಯೂಹದ ಆರಂಭಿಕ ಬಿಗ್‌ಬ್ಯಾಂಗ್ ಸ್ಫೋಟದ ಅವಧಿಯ ತೀವ್ರತೆಯನ್ನು ನಿರ್ಣಯಿಸಬಹುದು.

## ನಿತ್ಯ ಪಂಚಾಂಗ

ಮಾಸ: ಚೈತ್ರ | ಸಂವತ್ಸರ: ಕ್ರೋಧಿ

**23–04–2024 – ಮಂಗಳವಾರ**

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಚಿತ್ತ |
| ಯೋಗ | : ವಜ್ರ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:00:40 |
| ಸೂರ್ಯಾಸ್ತ | : 18:49:58 |
| ರಾಹು | : 15:38–17:14 |
| ಯಮಘಂಡ | : 09:13–10:49 |
| ಗುಳಿಕ | : 12:25–14:01 |

## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 22–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.57 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 117 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.817 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.53 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 256 ಕ್ಯುಸೆಕ್ |
| ಸಾಮರ್ಥ್ಯ | 3.013 ಟಿಎಂಸಿ |

# ಸಂತೆಯಲ್ಲಿ ಮತದಾನ ಜಾಗೃತಿ



ಹಂಪಿ ಟೈಮ್ಸ್ ಹರಪನಹಳ್ಳಿ:

ಸ್ವೀಪ್ ಸಮಿತಿ ವಿಜಯನಗರ ಜಿಲ್ಲಾ ನಿರ್ದೇಶನದಂತೆ ಹಾಗೂ ತಾಲೂಕ್ ಪಂಚಾಯ್ತಿ ಇವರ ನಿರ್ದೇಶನದಂತೆ ಹರಪನಹಳ್ಳಿ ಪಟ್ಟಣದ ಪುರಸಭೆ ವತಿಯಿಂದ ಮತದಾನದ ಜಾಗೃತಿಯನ್ನು ಶನಿವಾರ ಸಂತೆಯಿರುವ ನಿಮಿತ್ತ ಸಂತೆಯಲ್ಲಿ ಸಾರ್ವಜನಿಕರಿಗೆ ಮತದಾರ ಜಾಗೃತಿ ಅಭಿಯಾನವನ್ನು ಆಟೋಗಳ ಮೂಲಕ ನಗರದ ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ತಮ್ಮ ತಮ್ಮ ಮತಗಟ್ಟೆ ಕೇಂದ್ರಗಳಿಗೆ ತೆರಳಿ ದಿನಾಂಕ 7 ರಂದು ಬೆಳಿಗ್ಗೆ 7 ರಿಂದ ಸಂಜೆ 6 ರ ವರೆಗೆ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮತದಾರರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ ಇವರು ಮಾತನಾಡಿ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವದಲ್ಲಿ ಹೆಮ್ಮೆಯಿಂದ ಮತ ಚಲಾಯಿಸಬೇಕು, ನಿಮ್ಮ ಮತವು ಅಂತ್ಯಂತ ಮಹತ್ವದಾಗಿದೆ ನಿಮ್ಮ ಹಕ್ಕನ್ನು ಚಲಾಯಿಸಿ ಜವಬ್ಧಾರಿಯುತ ಮತದಾರರಾಗಬೇಕೆಂದು ಮತದಾರರಲ್ಲಿ ಜಾಗೃತಿಯನ್ನು ಮೂಡಿಸಿದರು. ಪುರಸಭೆ ಆರೋಗ್ಯ ಅಧಿಕಾರಿ ಮಂಜುನಾಥ್. ಶ್ಯಾಮರಾಜ. ಉಚ್ಚೆಂಗಪ್ಪ. ಹಾಗೂ ಪುರಸಭೆ ಸಿಬ್ಬಂದಿ ಉಪಸ್ಥಿತರಿದ್ದರು

# ಗಡಿಭಾಗದಲ್ಲಿ ಮದ್ಯಪಾನ ನಿಷೇಧ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶ

■ **ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ರ ಸಂಬಂಧ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯುವ ಮತದಾನ ದಿನದಂದು ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ವಿಜಯನಗರ ಜಿಲ್ಲೆಯ ಗಡಿಭಾಗದಲ್ಲಿ ಮದ್ಯಪಾನ ನಿಷೇಧಿಸಿ, ಒಣ ದಿನಗಳೆಂದು ಘೋಷಿಸಿ ಡಿಸಿ ಎಂ.ಎಸ್. ದಿವಾಕರ ಆದೇಶ ಹೊರಡಿಸಿದ್ದಾರೆ.



ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ಸಂಬಂಧ ಚಿತ್ರದುರ್ಗ ಜಿಲ್ಲೆಯಲ್ಲಿ ಮೊದಲ ಹಂತದ ಮತದಾನವು ಏಪ್ರಿಲ್ 26 ರಂದು ನಡೆಯಲಿದ್ದು, ಚಿತ್ರದುರ್ಗ ಜಿಲ್ಲಾ ಗಡಿಭಾಗದಲ್ಲಿ ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕು ಬರುವುದರಿಂದ ಗಡಿಭಾಗದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಹಾಗೂ ಅಬಕಾರಿ ಅಕ್ರಮಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ವಿಜಯನಗರ ಜಿಲ್ಲೆಯ ಗಡಿಭಾಗದ 5 ಕಿ.ಮೀ ವ್ಯಾಪ್ತಿಯಲ್ಲಿ ಏಪ್ರಿಲ್ 24ರ ಸಂಜೆ 6 ರಿಂದ ಏಪ್ರೀಲ್ 26ರ ಸಂಜೆ 6 ಗಂಟೆಯವರೆಗೆ ಎಲ್ಲಾ ಬಗೆಯ ಮದ್ಯದ ಅಂಗಡಿಗಳನ್ನು ಮುಚ್ಚುವಂತೆ ಮತ್ತು ಮದ್ಯ ಮಾರಾಟ, ತಯಾರಿಕೆ, ಮದ್ಯ ಸಾಗಾಣಿಕೆ ಹಾಗೂ ಇತರೆ ಸ್ಥಳಗಳಾದ ಬಾರ್ & ರೆಸ್ಟೋರೆಂಟ್, ಕ್ಲಬ್, ಹೋಟೆಲ್ ಡಾಬಾಗಳಲ್ಲಿ ಮದ್ಯ ಸಾಗಾಣಿಕೆ, ಶೇಖರಣೆ ಮತ್ತು ಮಾರಾಟ ಮಾಡುವುದನ್ನು ನಿಷೇಧಿಸಿ ಒಣ ದಿನಗಳೆಂದು ಎಂದು ಘೋಷಿಸುವಂತೆ ವಿಜಯನಗರ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಕೋರಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಮೊದಲ ಹಂತದ ಮತದಾನ ಪ್ರಕ್ರಿಯೆಯು ಮುಕ್ತವಾಗಿ ಹಾಗೂ ಶಾಂತಿಯುತವಾಗಿ ನಡೆಯಲು ಅನುಕೂಲವಾಗುವಂತೆ ಏಪ್ರಿಲ್ 24ರ ಸಂಜೆ 6 ಗಂಟೆಯಿಂದ ಏಪ್ರೀಲ್ 26ರ ಸಂಜೆ 6 ಗಂಟೆಯವರೆಗೆ ಚಿತ್ರದುರ್ಗ ಜಿಲ್ಲೆಯ ಗಡಿಭಾಗದಿಂದ 5 ಕಿ.ಮೀ. ವ್ಯಾಪ್ತಿಯಲ್ಲಿ (ವಿಜಯನಗರ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಂತೆ) ಬರುವ ಎಲ್ಲಾ ಬಗೆಯ ಮದ್ಯದ ಅಂಗಡಿಗಳಲ್ಲಿ ಸಾಗಾಣಿಕೆ, ಶೇಖರಣೆ ಮತ್ತು ಮಾರಾಟ ಮಾಡುವುದನ್ನು ನಿಷೇಧಿಸಿ ಒಣ ದಿನಗಳೆಂದು ಘೋಷಿಸಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ಅಬಕಾರಿ ಉಪ ಆಯುಕ್ತರು ಈ ಆದೇಶವನ್ನು ಅನುಷ್ಠಾನಕ್ಕೆ ತರಲು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ನ್ಯಾಯಸಮ್ಮತ ಚುನಾವಣೆಗೆ ರಾಜಕೀಯ ಪಕ್ಷಗಳ ಸಹಕಾರ ಅಗತ್ಯ

## ಚುನಾವಣಾ ಸಾಮಾನ್ಯ ವೀಕ್ಷಕ ಚಂದ್ರಶೇಖರ ಸಖಮುರಿ ಹೇಳಿಕೆ | ನಿರ್ದಿಷ್ಟ ದೂರುಗಳಿದ್ದಲ್ಲಿ 1950 ಸಹಾಯವಾಣಿಗೆ ಕರೆಮಾಡಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆಯನ್ನು ನಡೆಸಲು ಎಲ್ಲ ರಾಜಕೀಯ ಪಕ್ಷಗಳು ಅಗತ್ಯ ಸಹಕಾರ ನೀಡಬೇಕು ಎಂದು ಬಳ್ಳಾರಿ ಲೋಕಸಭಾ ಕ್ಷೇತ್ರ ಚುನಾವಣೆ ಸಂಬಂಧ ಆಗಮಿಸಿರುವ ಸಾಮಾನ್ಯ ವೀಕ್ಷಕ ಚಂದ್ರಶೇಖರ ಸಖಮುರಿ ಅವರು ಮನವಿ ಮಾಡಿದರು.

ಶನಿವಾರದಂದು, ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಬಳ್ಳಾರಿ ಜಿಲ್ಲೆಯಲ್ಲಿ ಚುನಾವಣೆ ಪ್ರಕ್ರಿಯೆಗಳನ್ನು ಅತ್ಯಂತ ಪಾರದರ್ಶಕವಾಗಿ ಕೈಗೊಳ್ಳಲಾಗುತ್ತಿದೆ. ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಹಲವು ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ಚುನಾವಣೆಗೆ ಸಂಬಂಧಿಸಿದಂತೆ ಹಣ, ವಸ್ತುಗಳು, ಮದ್ಯ ಸೇರಿದಂತೆ ಯಾವುದೇ ಸಾಮಗ್ರಿಗಳ ವಿತರಣೆ ಕಂಡುಬಂದಲ್ಲಿ ಅಥವಾ ಚುನಾವಣೆಗೆ ಸಂಬಂಧಿತ ಯಾವುದೇ ದೂರುಗಳಿದ್ದಲ್ಲಿ ತಮ್ಮ ಗಮನಕ್ಕೆ ತರಬಹುದಾಗಿದೆ. ಸುಗಮ ಚುನಾವಣೆಗೆ ಎಲ್ಲ ರಾಜಕೀಯ ಪಕ್ಷಗಳ ಸಹಕಾರ ಅಗತ್ಯವಾಗಿದೆ ಎಂದರು.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA